ಶ್ರೀ ಗುರುವಿಜಯವಿಠ್ಠಲರ ವಾರದ ಸುಳಾದಿಗಳು



ಶ್ರೀಗುರುವಿಜಯದಾಸಾಶ್ರಮ,
ರಾಯಚೂರು.

ಶ್ರೀ ಗುರುವಿಜಯವಿಠ್ಠಲರ ವಾರದ ಸುಳಾದಿಗಳು

ಸಂಗ್ರಹಕಾರರು
ಗುರು ಮಧ್ವರಾವ್ ಉಪ್ಪಲಿ
ರಾಯಚೂರು

ಪ್ರಕಾಶನ :
ಶ್ರೀ ಗುರುವಿಜಯದಾಸಾಶ್ರಮ
ಅಮರ್‌ಖೇಡ್ ಲೇಔಟ್ ರಾಯಚೂರು.

ಗುರುವಿಜಯವಿಠ್ಠಲರ ವಾರದ ಸುಳಾದಿಗಳು

ಮುದ್ರಣ : ಕ್ರಿ.ಶ. ೨೦೦೭

ಪುಟಗಳು : ೧೬ + ೫೬

ಪ್ರಕಾಶಕರು :
ಗುರುಮಧ್ವರಾವ್ ಉಪ್ಪಲಿ
ಜ್ಞಾನ ಪ್ರಸಾರ ಪ್ರಕಾಶನ
ಗುರುವಿಜಯದಾಸಾಶ್ರಮ
ಅಮರಖೇಡ್ ಲೇಔಟ್
ರಾಯಚೂರು

ಮುದ್ರಕರು :
ಸತ್ಯಶ್ರೀ ಪ್ರಿಂಟರ್ಸ್
ನಂ. ೧೬/೧, ೩ನೇ ಅಡ್ಡರಸ್ತೆ, ೨ನೇ ಮುಖ್ಯರಸ್ತೆ
ಕಸ್ತೂರಿಬಾ ನಗರ, ಮೈಸೂರು ರಸ್ತೆ
ಬೆಂಗಳೂರು - ೫೬೦ ೦೨೬
ಫೋನ್ : ೦೮೦-೨೩೨೫೦ ೩೭೩೮

H.H. SRI VISHVESHA TIRTHA SWAMIJI
SRI PEJAVARA ADHOKSHAJA MATHA
JAGADGURU SRIMADHWACHARYA MAHASAMSTHANA
UDUPI - 576 101, Karnataka
✆ : 0820-2520198, 2526598

श्री श्री विश्वेशतीर्थश्रीपादाः
श्री पेजावराधोक्षज मठः
जगद्गुरु श्रीमध्वाचार्यमहासंस्थानम्
उडुपि - ५७६ १०१, कर्नाटक.

Date : ....

<u>ಆಶೀರ್ವಚನ</u>

ಶ್ರೀ ಗೋಪಾಲ ಕೃಷ್ಣ ಪ್ರಸೀದ

ಶ್ರೀ ಮೊದಲಕಲ್ಲು ಶೇಷದಾಸರು ವಾರದ ಪ್ರತಿ ದಿನದಲ್ಲೂ ಪಾರಾಯಣ ಮಾಡಲು ಅನುಕೂಲವಾಗುವಂತೆ ವಾರದ ಸುಳಾದಿಗಳನ್ನು ರಚಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ ಪ್ರಕಟಗೊಳಿಸುತ್ತಿರುವ ಉಪ್ಪಲಿ ಗುರುಮಧ್ವರಾಯರು ದಾಸ ಸಾಹಿತ್ಯದ ಅಮೋಘ ಸೇವೆ ಮಾಡುತ್ತಿರುವರು. ಇವರಿಗೆ ಆಯ ಆರೋಗ್ಯ ಕೊಟ್ಟು ಇವರಿಂದ ಇನ್ನು ಹೆಚ್ಚಿನ ಸೇವೆ ಮಾಡಿಸಲಿ ಎಂದು ಶ್ರೀ ಕೃಷ್ಣನಲ್ಲಿ ಪ್ರಾರ್ಥಿಸುತ್ತೇವೆ.

ಇಂತಿ ನಾರಾಯಣ ಸ್ಮರಣೆಗಳು

ಸರ್ವಜಿತ್ ಸಂವತ್ಸರ
ಚೈತ್ರ ಶುದ್ಧ ಪ್ರತಿಪದ

Poornaprajna Vidyapeetha, Kattriguppe Main Road, Bangalore-560 028 Tel : 091-80-26791726, 9845468908
E-mail : ppmbk@gmail.com

ಮುನ್ನುಡಿ

"ಶ್ರೀ ಗುರುವಿಜಯವಿಠ್ಠಲರ ವಾರದ ಸುಳಾದಿಗಳು ಗ್ರಂಥದ ಮುನ್ನುಡಿ

ವಿದ್ಯಾವಾಚಸ್ಪತಿ ಡಾ।। ಅರಳುಮಲ್ಲಿಗೆ ಪಾರ್ಥಸಾರಥಿ

ಮಾನವ ಜೀವನ ಪಾವನ ಮಾಡುವ ಭಾವನೆ ಇರುವುದು, ಬರುವುದು, ಆಧ್ಯಾತ್ಮದಲ್ಲಿ. ಅಂತಹ ಆಧ್ಯಾತ್ಮಕ್ಷೇತ್ರದಲ್ಲಿ, ಜೀವ ಜಾತದಲ್ಲಿದ್ದ ಮೌನಮುದ್ರೆ ಮುರಿದು, ಹಾಡಿನಾಚೆಗೆ ಇದ್ದ ಜ್ಞಾನನಿದ್ರೆ ತೆರೆದು, ವಚನಪ್ರವಚನ ರಚನೆಗಳಿಗೆ ಗೀತಗತಿನೀಡಿ ಭಕ್ತಿರತಿಯ ಹಾಡುಹಬ್ಬಗಳನ್ನು ಮತಿ ಅರಳುವಂತೆ ಮನೆಮನೆಗೆ ನೀಡಿದ್ದು, ಹಾಡಿದ್ದು ಹರಿದಾಸಸಾಹಿತ್ಯ. ಆನಂದತೀರ್ಥರೆಂಬ ಜ್ಞಾನಸಾಗರದಿಂದ ಮೂಡಿಬಂದ ಅಮೃತಕುಂಭದಂತಿರುವ ಧ್ವಾದಶಸ್ತೋತ್ರವೇ ದಾಸಸಾಹಿತ್ಯಕ್ಕೆ ಪ್ರೂರ್ತಿಸ್ಫೂರ್ತಿ. ಆ ಜಾಡಿನ ನಾಡಿಯ ನಡೆಯನ್ನು ಹಿಡಿದು, ನುಡಿಯಲ್ಲಿ ನಾದ, ತಿರುಳಲ್ಲಿ ಸ್ವಾದ ವಿಟ್ಟು, ಹೊಸದೊಂದು ಅನುಭವಪ್ರಪಂಚವನ್ನೇ ತಮ್ಮ ದೇವರ ನಾಮಗಳಿಂದ ತೆರೆದಿಟ್ಟ ಪೂತಾತ್ಮರೆಂದರೆ ಪುರಂದರ ದಾಸರಯ್ಯಾ, ದಾಸರೆಂದರೆ ಪುರಂದರ ದಾಸರಯ್ಯ.

ಉಳಿದವರು ಹತ್ತು ಮಾತುಗಳಲ್ಲಿ ಹೇಳುವುದನ್ನು ಪುರಂದರರು ಒಂದು ಮುತ್ತು ಮಾತಿನಲ್ಲಿ ಹಾಡಿದರು, ಹಾಡುತ್ತಾ ಹಾಡುತ್ತಾ ವಿಠಲನನ್ನು ನೋಡಿದರು, ಕಾಡಿದರು, ಪಾಡಿದರು, ಅವರಿಗೆ ಮತ್ತೆ ಮತ್ತೆ ಮಾಧವನ ಸ್ಮರಣೆ, ಸ್ಮರಣೆಯೊಂದೇ ಸಾಲದೇ ಮುಕ್ತಿಗೆ. ಮುಕ್ತಿಮಂಟಪಕ್ಕೆ ಭಕ್ತಿಯ ಮೆಟ್ಟಲುಗಳು, ಪುರಂದರರ ಅನುಗ್ರಹದ

ಅಕ್ಷಯರಕ್ಷೆಯಿಂದ ಆ ಮೆಟ್ಟಿಲುಗಳನ್ನು ಹತ್ತಿಬಂದ ವಿಜಯೀದಾಸರೆಂದರೆ ವಿಜಯದಾಸರು. ಮಧ್ವಾಚಾರ್ಯರ ಸತ್ಸಿದ್ಧಾಂತ ಪ್ರತಿಪಾದನೆಗೆ ಭಗವಂತನ ಆದೇಶದಂತೆ ಬಾನಿನಿಂದ ಭುವಿಯೆಡೆಗೆ ದೇವತೆಗಳೇ ಅವತರಿಸುತ್ತಾರೆ ಎಂದು ಸೂಕ್ಷ್ಮವಾಗಿ ತಿಳಿಸಿದವರೇ ವಿಜಯದಾಸರು, ಅರ್ಜುನಾಂಶರಾದ ಶ್ರೀ ಮೊದಲಕಲ್ಲು ಶೇಷದಾಸರು, ನಾರದರು, ಭೃಗುಮುನಿಗಳು, ಗಣಪತಿ, ಸಲ್ಹಾದರುಗಳೇ ಹರಿದಾಸರುಗಳಾಗಿ ಬಂದು ಹರಿವಾಯುಗಳ ಸೇವೆ ಮಾಡಿದಂತೆ, ಅರ್ಜುನಾಂಶರೆನಿಸಿದ ಶ್ರೀ ಮೊದಲುಕಲ್ಲು ಶೇಷದಾಸರು 'ಶ್ರೀ ಗುರುವಿಜಯವಿಠಲ'ದಾಸರೂ ದಾಸಸಾಹಿತ್ಯದ ದಿಗಂತಗಳನ್ನು ತಾತ್ವಿಕವಾಗಿ, ಸಾತ್ವಿಕವಾಗಿ ವಿಸ್ತರಿಸಿದರು. ಶ್ರೀ ಗುರುವಿಜಯವಿಠಲದಾಸರ ಒಂದೊಂದು ಪದಸುಳಾದಿಯೂ ಓಂಕಾರದ ಝೇಂಕಾರವಿದ್ದಂತೆ, ಸಂಸ್ಕಾರಗಳ ಉದ್ಗಾರವಿದ್ದಂತೆ. ದಾಸರಿಗೆ 'ಗುರುವಿಜಯವಿಠಲದಾಸ'ರೆಂಬ ಅಂಕಿತವಿದ್ದರೂ ಅವರು ಖ್ಯಾತಾಭಿಗೀತರಾದದ್ದು ಮೊದಲಕಲ್ಲು ಶೇಷದಾಸರೆಂದೇ.

ಪ್ರತಿನಿತ್ಯ ಪ್ರಾತಃಕಾಲದಿಂದಲೂ ಪಾರ್ಥಸಾರಥಿಯನ್ನು ಪ್ರೀತಿಸಿ ಕೀರ್ತಿಸುತ್ತಾ ಸಾರ್ಥಕವಾದ ಅರ್ಥಪೂರ್ಣ ದಾಸಸಾಹಿತ್ಯಸೇವೆ ಮಾಡಿದ ಶೇಷದಾಸರು ಗದ್ವಾಲದ ಬಳಿಯ ಧರೂರಿನವರು. ವೃತ್ತಿಯಿಂದ ಜಡವಾಗಿ, ಅದು ಬಿಟ್ಟಮೇಲೆ ಚೈತನ್ಯದ ಗಿಡವಾಗಿ, ಸುಳಾದಿಪ್ರಮೇಯಗಳ ಆಧ್ಯಾತ್ಮಿಕ ಬುಡವಾದವರು ಮೊದಲಕಲ್ಲು ಶೇಷದಾಸರು, ಅವರು ಚಿಂತರವೇಲಿ ಪ್ರಾಣದೇವರಲ್ಲಿ ಅನಶನ ವ್ರತದಿಂದ ನೈವೇದ್ಯಮಾಡಿದರು. ನವವೃಂದಾವನದ ಯತಿಗಳಲ್ಲಿ ಸೇವಾಮಾಡಿ, ಮನದ ಭಾವವನ್ನು ಗಂಗಾಪವಿತ್ರ ಮಾಡಿಕೊಂಡರು, ಕಡೆಗೆ ಚಿಪ್ಪಗಿರಿಯ ಅಪ್ಪ ವಿಜಯದಾಸರಲ್ಲಿ ಬಂದರು. ಅಪ್ಪರಲ್ಲಿ ಮೆದುಳೆಲ್ಲ ತೊಳದಿತ್ತು, ಬಗೆ ಸಂಸ್ಕರಣಗೊಂಡಿತ್ತು. ಸಮಸ್ತವನ್ನೂ ವಿಜಯದಾಸರ ಪಾದಕ್ಕೆ ಹಾಕಿ ನಿಶ್ಚಿಂತರಾದರು. ಈಗ ಚಿಪ್ಪಗಿರಿಯ ಜ್ಞಾನಸೂರ್ಯರ ಪ್ರಖರಕಿರಣಗಳು

'ಗುರುವಿಜಯವಿಠಲ' ಅಂಕಿತದ ಮೂಲಕ ಶೇಷದಾಸರಲ್ಲಿ ಸ್ವಪ್ನದಂತೆ ಅರಳಿಸಿದುವು. ಚಿಪ್ಪಗಿರಿಯ ನೆತ್ತಿಹಾದಿಯಿಂದ ಮೊದಲಕಲ್ಲಿನ ಮೂಲದ ಬುನಾದಿಗೆ ಬಂದರು. ಸುಳಾದಿದಾಸರ ಅನುಗ್ರಹರೂಪವಾದ ನಿಧಿನಿಕ್ಷೇಪಗಳನ್ನು ಹೊತ್ತು ತಂದರು. ಮೊದಲಕಲ್ಲಿನಲ್ಲಿ ತಮ್ಮ ಭಕ್ತಿಯಿಂದ ಶಿವಶಕ್ತಿಯನ್ನು ಮಣಿಸಿದರು, ಬಿಂಬಾಪರೋಕ್ಷ ಪಡೆದರು, ಸತ್ವಭರಿತ ಸುಳಾದಿಗಳನ್ನು ಹಡೆದರು. ತತ್ವನವನೀತವನ್ನು ಕಡೆದರು. ಅವರ ಒಂದೊಂದು ಸುಳಾದಿಯೂ ಬೆಳಕಿನ ಕಣ್ಣಾದುವು. ಪಕ್ವಭರಿತ ಹಣ್ಣಾದುವು.

ಜನ್ಮಭೂಮಿಯ ಎದೆಯಾಳದ ಪ್ರೀತಿಯಿಂದಾಗಿ ಧರೂರಿನಲ್ಲಿ ಪಾರ್ಥಸಾರಥಿಯನ್ನು ಪ್ರತಿಷ್ಠಾಪಿಸಿದರು. ಕಾಮವನ್ನು ಸುಟ್ಟು, ಸತ್ಯವನ್ನು ನೆಟ್ಟ ಸತ್ಯಕಾಮತೀರ್ಥರಂತಹ ಮಹಾಜ್ಞಾನಿ ಪೀಠಾಧಿಪತಿಗಳ ಪರಮಾನುಗ್ರಹಕ್ಕೆ ಪಾತ್ರರಾದರು. ದಾಸಸಾಹಿತ್ಯದ ಕಣಜವನ್ನು ತಮ್ಮ ಮಂತ್ರಸಿದ್ಧಿಯ ಸುಳಾದಿ ಉಗಾಭೋಗಗಳಿಂದ ಸಮೃದ್ಧ ಮಾಡಿದರು. ಅರವತ್ತೆಂಟರ ನಂಟಿಗೆ ಕಾದಿತ್ತು ಅವರ ಸಾಧನ ಶರೀರದ ಗಂಟು. ಅರವತ್ತೆಂಟು ಸಾರ್ಥಕ ಸಂವತ್ಸರಗಳ ಕಾಲ ಬದುಕಿ ಬಾಳಿದ ಅವರ ಸಾಧನೆಯ ಅದ್ಭುತ ಆಯಾಮಗಳಿಗೆ ಭಾಷ್ಯದಂತೆ ಬಂದದ್ದೇ ಪೂಜ್ಯ ಶ್ರೀ ರಘುದಾಂತತೀರ್ಥರು ರಚಿಸಿದ 'ಶ್ರೀ ಶೇಷದಾಸರ ಅಷ್ಟಕ'.

ಕಾದಿದ್ದವು ದಶಕಗಳು ಭಕ್ತರೊಬ್ಬರ ಆಗಮನಕ್ಕೆ, ಬಂದೇ ಬಂದರು. ಶೇಷದಾಸರ ಸೇವೆಯನ್ನು ಉಸಿರುಮಾಡಿಕೊಂಡು, ಬದುಕನ್ನು ಸಾರ್ಥಕ ಪಡಿಸಿಕೊಳ್ಳುತ್ತಿರುವ ಧನ್ಯಜೀವ ಪೂಜ್ಯ ಶ್ರೀಗುರುಮಧ್ವರಾವ್ ಉಪ್ಪಲಿಯವರು. ಹರಿದಾಸವಾಙ್ಮಯ ವಿಶಾರದರಾಗಿ, ಸುಳಾದಿರತ್ನಾಕರರಾಗಿ ಅವರು ಪರಿಶೋಧಿಸಿರುವ ಶೇಷದಾಸರ ಅಪೂರ್ವವಾದ ವಾರದ ಸುಳಾದಿಗಳು, ಉಗಾಭೋಗಗಳು, ಪದಗಳು, ಶೇಷದಾಸರ ಸ್ತುತಿಕೃತಿಗಳು ಮುಂತಾದುವು ಈ ಕೃತಿಯನ್ನು ಮಹತ್ವಪೂರ್ಣವಾಗಿಸಿವೆ.

1996ರಲ್ಲಿ ಮೊಟ್ಟಮೊದಲಬಾರಿಗೆ ಮೊದಲಕಲ್ಲು ಶೇಷದಾಸರ ಆರಾಧನಾ ಮಹೋತ್ಸವದ ಪರಿಕಲ್ಪನೆಯನ್ನು ಕಂಡವರು ಪೂಜ್ಯಶ್ರೀ ಗುರುಮಧ್ವರಾವ್ ಉಪ್ಪಲಿಯವರು ಹಿರಿಯ ಹರಿದಾಸರಾದ ಪೂಜ್ಯಶ್ರೀ ಕಾಶೀ ಹನುಮಂತದಾಸರ ಒಡಗೂಡಿ ಅವರು ಆರಾಧನಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಶೇಷದಾಸರ ಅನುಗ್ರಹಶಕ್ತಿಯೋ, ಉಪ್ಪಲಿ ತಾತನವರ ಭಕ್ತಿಯೋ ಅಥವಾ ಕಾಶೀ ಹನುಮಂತದಾಸರ ಸಂಘಟನಾ ಸಾಮರ್ಥ್ಯವೋ ಅಂತೂ ಆರಾಧನಾ ರಥೋತ್ಸವ ಸಕ್ರಮವಾಗಿ ವಿಕ್ರಮಸಾಧಿಸುತ್ತಾ ಹೊರಟಿತು.

ಇನ್ನು, ಈ ಕೃತಿಯನ್ನು ಹರಿದಾಸಬಂಧುಗಳ ಸುಕೃತಿಯೆನ್ನುವಂತೆ ಶ್ರೀಮತಿ ಶ್ಯಾಮಲಾಬಾಯಿ ಕೊಳ್ಳಿ ಹಾಗೂ ಕುಟುಂಬವರ್ಗದವರು ಕನ್ನಡ ಜನತೆಗೆ ನೀಡಿದ್ದಾರೆ. ಇದನ್ನು ಕೊಳ್ಳಿ ಮನೆತನದ ಹಿರಿಯ ಸಾಧಕರಾಗಿದ್ದ ದಿವಂಗತ ರಾಮಾಚಾರ್ಯ ಕೊಳ್ಳಿಯವರ ದಿವ್ಯಸ್ಮರಣೆಗಾಗಿ ಅವರ ಸೊಸೆ ಶ್ರೀಮತಿ ಶ್ಯಾಮಲಾಬಾಯಿ ಕೊಳ್ಳಿ ಪ್ರಕಟಿಸಿದ್ದಾರೆ. 1897 ರಿಂದ 1939ರ ವರೆಗೆ 42 ವರ್ಷಗಳ ಮಾತ್ರ ಜೀವಿಸಿದ್ದ ಪೂಜ್ಯ ರಾಮಾಚಾರ್ಯಕೊಳ್ಳಿಯವರ ಸಾಧನೆ ಮಹತ್ವದ್ದು. ಯುಗಪುರುಷರೂ, ಅಭಿನವ ಆನಂದತೀರ್ಥರು ಎಂದೇ ಖ್ಯಾತಾಭೀಗೀತರಾಗಿದ್ದ ಉತ್ತರಾದಿ ಮಠಾಧೀಶರಾಗಿ ಇತಿಹಾಸ ನಿರ್ಮಾಣ ಮಾಡಿದ್ದ ಪೂಜ್ಯಶ್ರೀ ಸತ್ಯಧ್ಯಾನರ ಕಾಲದಲ್ಲಿ ಕೆಲಕಾಲ ಶ್ರೀಮಠದ ದಿವಾನರಾಗಿಯೂ ಸಮರ್ಥಸೇವೆ ಸಲ್ಲಿಸಿದ್ದವರು ರಾಮಾಚಾರ್ಯ ಕೊಳ್ಳಿ. ಹರಿದಾಸರ ನೆಲೆಬೀಡಾಗಿದ್ದ ರಾಯಚೂರಿನಲ್ಲಿ ಇಪ್ಪತ್ತೈದು ವರ್ಷಗಳ ಕಾಲ ನಿರಂತರ ಮಾಧ್ವಸಿದ್ಧಾಂತ

ಅಭಿನಂದಿಸುತ್ತೇನೆ. ತಿರುಪತಿಯಂತಹ ಕಲಿಯುಗ ವೈಕುಂಠದಲ್ಲಿ ಮೊದಲುಕಲ್ಲು ಶೇಷದಾಸರ ಆರಾಧನೆಯನ್ನು ಪೂಜ್ಯ ಶ್ರೀ ಉಪ್ಪಲಿ ಗುರುಮಧ್ವರಾವ್ ಅವರು ಹನ್ನೆರಡನೆಯ ಬಾರಿಗೆ ಭಕ್ತಿ ಸಂಭ್ರಮದಿಂದ ವೈಭವ ವಿಜೃಂಭಣೆಗಳಿಂದ ಆಚರಿಸುತ್ತಿರುವ ಸಂದರ್ಭದಲ್ಲಿ ಈ ಕೃತಿ ಬಿಡುಗಡೆಯಾಗುತ್ತಿದೆ. ಇದು ಔಚಿತ್ಯಪೂರ್ಣ ಹಾಗೂ ಹರ್ಷವರ್ಷದ ಸಂಗತಿ.

ಸುಳಾದಿರತ್ನಾಕರ, ಹರಿದಾಸಕುಲಭೂಷಣರಾದ ಪೂಜ್ಯ ಶ್ರೀ ಗುರುಮಧ್ವರಾವ್ ಉಪ್ಪಲಿಯವರ ಈ ಶೇಷದಾಸ ಸೇವಾಕಾರ್ಯದ ಹರ್ಷೋತ್ಕರ್ಷ ನಿರಂತರವಾಗಿ ಆಗಲಿ. ದಾಸಸಾಹಿತ್ಯಾಭಿಮಾನಿಗಳು ಶೇಷದಾಸರ ಸಾಹಿತ್ಯದ ಈ ಕೃತಿಯನ್ನು ಭಕ್ತಿಗೌರವದಿಂದ ಬರಮಾಡಿಕೊಳ್ಳಲಿ ಎಂದು ಹಾರೈಸುತ್ತಾ, ಶೇಷದಾಸರ ಹಾಗೂ ಹರಿದಾಸಪರಂಪರೆಯ ಅಮೃತಾನುಗ್ರಹದ ಅಕ್ಷಯರಕ್ಷೆ ನನ್ನ ಮೇಲಿರಲಿ ಎಂದು ಪ್ರಾರ್ಥಿಸುತ್ತಾ ನನ್ನ ಈ ನುಡಿನಿವೇದನೆಯನ್ನು ಸಂಪನ್ನಗೊಳಿಸುತ್ತಿದ್ದೇನೆ,

- ಹರಿದಾಸರ ಚರಣಧೂಳಿ

ಅರಳುಮಲ್ಲಿಗೆ ಪಾರ್ಥಸಾರಥಿ

ಬೆಂಗಳೂರು.

ಪರಿವಿಡಿ

ಪುಟಸಂಖ್ಯೆ

ಶೇಷದಾಸರ ಪರ ಸ್ತೋತ್ರಪದಗಳು :

ಶ್ರೀ ಪಾರ್ಥಸಾರಥೇ ನಮಃ

ಶ್ರೀ ಗುರುವಿಜಯು ವಿಠ್ಠಲರ

ಆಪತ್ತು ಪರಿಹಾರ ಉಗಾಭೋಗಗಳು

ಉಗಾಭೋಗ - ೧

ಗುರು ವಿಜಯ ರಾಯರೊಂದು ಸಮ್ಮುಖದಲ್ಲಿ ಬಂದು । ಪರಿವ್ಯಾಪ್ತನಾದ ಹರಿಯ ವಿವಿಕ್ಷದಿ । ಪರಿಪರಿ ವಿಧದಿಂದತ್ಸುತಿಸಿ ಪ್ರಾಂತ್ಯದಲ್ಲಿ । ಗುರುವಿಜಯವಿಠ್ಠಲನ್ನ ಸೇವಕ ನೀನೆಂದು । ಕಾರಣದಿಂದ ನಿನಗೆ ಇದೇ ಮುದ್ರಿಕವು ಎಂಬ । ತೆರವಾದ ಸಂಜ್ಞವೆಂದು ಸೂಚಿಸಿದಿ । ಪರಮ ಧನ್ಯನಾದೆ ಗುರು ವಿಜಯದಾಸರಿಗೆ । ಚರಣ ಸೇವಕನಾದೆ ನಿನ್ನ ದಯದಿ । ಗುರುಗಳ ದ್ರೋಹದಿಂದ ಮುಕ್ತನಾಗಿ ನಿನ್ನ । ಕುರುಹು ಕಾಣುವ ಅಧಿಕಾರಿಯಾದೆ । ಪರಿಪೂರ್ಣ ಕೃಪಾನಿಧೆ ಗುರುವಿಜಯವಿಠ್ಠಲ ನಿನ್ನ । ಕರುಣದ ಫಲವಿದೆ ಬಾಳಿದದಕೆ ॥

(ರಾಕ್ಷಸನಾಮ ಸಂ ॥ ಮಾರ್ಗಶಿರ ಬ ॥ ಸಪ್ತಮಿ ಶುಕ್ರವಾರ ಶಾ ॥ ಶಕೆ ೧೭೭೭)

ಉಗಾಭೋಗ - ೨ -ಶ್ರೀ- ತ್ರಿವಿಡಿತಾಳ

ಭಕ್ತವತ್ಸಲನೆಂಬ ಬಿರುದುಳ್ಳದೇವ ನಿನ್ನ । ಭಕುತಿಯಿಂದಲಿ ನಮಿಸಿ ಭಿನ್ನೈಸುವೆ । ರಿಕತನ ಬಿನ್ನಪವ ಮನಕೆತಂದುವೇಗ ಆ-। ಸಕುತಿಯಿಂದಲಿ ಗ್ರಹಿಸಿ ಸಫಲಮಾಡೊ । ಭಕುತನಾದ ಇವಗೆ ಲೌಕಿಕದಿಂದ ಬಂದ । ವಿಕಟರೂಪವಾದ ದುರಿತದಿಂದ । ಮುಕುತನ್ನ ಮಾಡುವದು ಕರುಣದಿಂದಲಿ ವೇಗ । ಶಕಟಭಂಜನ ಶ್ರೀ ಕೃಷ್ಣ । ವುತ್‌ಕೃಷ್ಟನು ನೀ ಮುಕಿತಿದಾಯಕ ಗುರುವಿಜಯ ವಿಠ್ಠಲ । ಮದ್ಭಕ್ತನ ಪ್ರಣಶ್ಯತಿ ಎಂಬೋದು ಸತ್ಯಮಾಡು॥

ಉಗಾಭೋಗ - ೩ -ಶ್ರೀ- ತ್ರಿವಿಡಿತಾಳ

ಭಕ್ತರ ಮನೋರಥ ಪೂರ್ಣಮಾಡುವಲ್ಲಿ । ಉಕ್ತವಾದ ಕಾಮಧೇನು ಎನಿಪೆ । ಭಕ್ತರ ಅಪರಾಧ ಸಹನ ಮಾಡುವರಲ್ಲಿ ಧಾರಿತ್ರಿಯೊಳಗೆ ಸಮಾನ ನೆನಿಪ ಸಾರ್ವ ಭೌಮ। ಭಕ್ತರ ಮ್ಯಾಲೆ ಮಹ ಕರುಣ ಮಾಡುವಲ್ಲಿ ಪಿತೃ ಮಾತೃ ಗುರು ಭ್ರಾತೃ ಸಮಾನ ನೆನಿಪೆ । ಭಕ್ತರ ಅಭಿಮಾನ ಸಹನ ಮಾಡುವಲ್ಲಿ ಮಿತ್ರ ನೆನಿಸಿಕೊಂಬೊ ಅನಿಮಿತ್ತ ಬಂಧು । ಭಕ್ತರ ದುರಿತ ಕಳದು ಕಾವ ವಿಷಯದಲ್ಲಿ ಛತ್ರ ನೆನಿಪೆ ಸತತ ಸನ್ಮಂಗಳಾಂಗ । ಭಕ್ತರ ನಿಂದಕರ ನಿಗ್ರಹ ಮಾಡುವಲ್ಲಿ ಮೃತ್ಯು ಯಮ ಸದೃಶನೆನಿಪ ದೇವ । ಭೃತ್ಯವತ್ಸಲ ಗುರುವಿಜಯ ವಿಠ್ಠಲರೇಯ । ಭಕ್ತರ ಪೊರೆವ ಬಿರಿದು ನಿನ್ನದಯ್ಯಾ ॥

ಉಗಾಭೋಗ - ೪ -ಶ್ರೀ- ಮಟ್ಟತಾಳ

ಶತೃಮಿತ್ರಗಳಲ್ಲಿ ಸಮಸ್ಥಿತನಾಗಿ ನೀನೆ । ಪ್ರಕೃತಿಯು ಜೀವಕಾಲ ಅನುಸರಿಸಿ । ಕೃತ್ಯವಗಳಮಾಳ್ಪವನಾಗಿ ಜೀವರ್ಗೆ ಸುಖದುಃಖ । ಮೊತ್ತಗಳುಣಿಸುವಿ ನಿಯಮದಂತೆ । ಕತೃನೆಂದು ನಿನ್ನ ನೆರೆನಂಬಿ ಇಪ್ಪವಂಗೆ ದುಷ್ಕೃತ್ಯಗಳಿಲ್ಲವೆಂದು ಶಾಸ್ತ್ರ ಸಿದ್ಧ । ಚಿತ್ತಕ್ಕೆತಂದು ವೇಗ । ಶತ್ರು ಸಹಸವನ್ನು ವ್ಯರ್ಥಮಾಡಿ ಭಕ್ತನಾದವನ । ಹತ್ತಿಲಿ ಕರೆದು ದಯದೃಷ್ಟಿಯಿಂದಲಿ ನೋಡಿ । ಉತ್ತಮವಾದ ಸುಖವೈದಿಪದೊ ಭಕ್ತವತ್ಸಲ ಗುರು ವಿಜಯ ವಿಠ್ಠಲರೇಯ । ಎತ್ತಲಿದ್ದರು ನಿನ್ನಪೊಂದಿದವನು॥

ಉಗಾಭೋಗ - ೫ -ಶ್ರೀ

ಇನ್ನೆಷ್ಟು ಕಾಲಕ್ಕೆ ಮರಿಯಾದಂತೆ ಮಾಡಿಸಿದಿ । ಉನ್ನತ ಮಹಿಮ ನಿನ್ನ ಇಚ್ಛಕ್ಕೆ ಯಿದಿರಾರೊ । ಇನ್ನಾದರೂ ನೀ ಕೃಪೆಇಂದ ನೋಡದಿರೆ ಘನ್ನವಾದ ದುಃಖದಿಂದ ಕಡೆಗೆ ಐದುವಿನೆಂತೊ । ಚಿನ್ಮಯ ಮೂರುತಿ ಗುರುವಿಜಯವಿಠ್ಠಲರೇಯ । ಯೆನ್ನ ಅಪರಾಧವು ನಿನಗರ್ಪಿತವು ॥

।ಶ್ರೀ ಕೃಷ್ಣಾರ್ಪಣಮಸ್ತು ।

ಶ್ರೀ ಮೊದಲಕಲ್ಲು ಶೇಷದಾಸರ ವಾರದ ಸುಳಾದಿಗಳು.

ಆದಿತ್ಯವಾರದ ಸುಳಾದಿ

ಧೃವತಾಳ

ಆಲಿಸಿ ಕೇಳುವುದು ಆದರದಿಂದಲಿ ।
ಶ್ರೀ ಲಕುಮೀಶನ ಭಕುತರೆಲ್ಲ ।
ಕಾಲದೇಶ ವ್ಯಾಪ್ತಿಳಿನಿಪಳಿಗಾದರೂ ।
ಶೀಲ ಮೂರುತಿಯಿಂದ ಸುಖವೆಂಬೊದೊ ।
ಕೇಳಿಬಲ್ಲದ್ದೆ ಸರಿ ಶೃತಿ ಸ್ಮೃತಿ ಮುಖದಿಂದ ।
ಆಲೋಚನೆ ಇದಕ್ಕಿಲ್ಲ ಎಣಿಸಿ ಗುಣಿಸು ।
ಮೂಲಜೀವರ ಸುಖಕೆ ಶ್ರೀಪತಿ ಆದ ಬಳಿಕ ।
ಹಲವು ಬಗೆಯಲಿ ಹರಿಯ ಸಂಪಾದಿಸು ।
ಇಳೆಯೊಳು ವಾಜಿಪೇಯ ಪೌಂಡರೀಕಾದಿಯಜ್ಞ ।
ನಿರ್ಮಲವಾದ ಧ್ಯಾನ ಜಪ ನೇಮವೊ ।
ಜಾಲನಕ್ಷತ್ರ ಸಂಖ್ಯಮೀರಿದ ಮಹಾದಾನಾ ।
ಕಾಲೋಚಿತವಾದ ಕರ್ಮಧ್ಯಾನ ಮೌನ
ಜ್ವಾಲವಾದ ಕ್ರೂರ ತಪ ಹೋಮ ಸುರರರ್ಚನ ।
ಸ್ಥೂಲ ಕರ್ಮಾಭಿಜಾತ ಪುಣ್ಯದಿಂದ ।
ತ್ರಿಲೋಕಾಧಿಪತಿ ಸ್ಥಾನ ವೈದಿದನಂತರ ।
ಇಳಿಯಬೇಕೋ ಧರೆಗೆ ಭೂಯೊ ಭೂಯೊ ।
ಒಲಿಯನು ಇದಕ್ಕ ಜಲಜಾಯತೇಕ್ಷಣ ।
ಒಲಿಸಬೇಕೆಂಬೋದು ಮನದಲ್ಲಿತ್ತೆ ।
ಪೇಳಿದ ಮಾತಿನಲ್ಲಿ ಸಂದೇಹ ಮಾಡದಲೆ ।
ಸುಲಭವಾದ ಪಥ ಪಿಡಿಯೋ ಬೇಗ ।
ನೀಲಾಂಬುದಶ್ಯಾಮ ಗುರುವಿಜಯವಿಠ್ಠಲರೇಯ ।
ಪಾಲಿಸುವನು ಇದಕೆ ಶೃತಿಯೇ ಸಾಕ್ಷಿ ॥ ೧ ॥

ಮಟ್ಟತಾಳ

ಪ್ರವೃರ್ತಿ ನಿವೃತ್ತಿ ಅಭಿದಾನದಿ ಕರ್ಮ ।
ದ್ವಿವಿಧವಾಗಿ ಉಂಟು ತಿಳಿವದು ಚನ್ನಾಗಿ ।
ಪ್ರವರ್ತಿ ಕರ್ಮವನು ಸ್ವಪ್ನದಿ ಕಾಮಿಸದೆ ।

ನಿವೃತ್ತಿ ಕರ್ಮದಲಿ ರತಿ ಉಳ್ಳವನಾಗಿ ।
ದೇವ ಎನ್ನೊಳಗಿದ್ದು ಕಾಲ ಕರ್ಮಾನುಸಾರ ।
ಆವಾವದು ಮಾಳ್ಪ ಮಾಡುವೆನದರಂತೆ ।
ಆವ ಮಾಡಿಸದಿರಲು ನಾನ್ಯಾತಕೆ ಸಲ್ಲೆ ।
ಕಾವ ಕೊಲ್ಲುವ ತಾನೆ ಅನ್ಯರು ಎನಗಿಲ್ಲ ।
ಸರ್ವಾಧಿಷ್ಠಾನದಲಿ ಹರಿಯೆ ವ್ಯಾಪಿಸಿ ಇದ್ದು ।
ಶರ್ವಾದಿಗಳಿಂದ ವ್ಯಾಪಾರವ ಗೈಸಿ ।
ನಿರ್ವಾಹಕ ನಾಹ ಸ್ವತಂತ್ರ ತಾನಾಗಿ ।
ಓರ್ವನಾದರೂ ಶ್ವಾಸ ಬಿಡುವ ಸೇದಿಕೊಂಬ ।
ಗರ್ವಿಗಳಿಲ್ಲವೊಈ ಪೃಥ್ವಿ ಮಧ್ಯ ।
ಈವಿಧದಲಿ ತಿಳಿದು ಜೀವರ ಲಕ್ಷಣ
ಸಾವಧಾನದಿ ಗುಣಿಸು ಹರಿಕರ್ತೃತ್ವವನು ।
ದೇವ ದೇವನೆ ಬಿಂಬ ಜೀವನೆ ಪ್ರತಿ ಬಿಂಬ ।
ಭಾವ ಕೆಡದಂತೆ ಯೋಚಿಸು ಸರ್ವತ್ರ ।
ಜೀವ ಭಿನ್ನ ಗುರು ವಿಜಯ ವಿಠ್ಠಲರೇಯ ।
ಸೇವಕರಭಿಮಾನ ಎಂದೆಂದಿಗೆ ಬಿಡನು ।।೨।।

ತ್ರಿವಿಡಿತಾಳ

ತನುವಿನೊಳಗೆ ಹೊರಗೆ ವಿಭಕ್ತ ಅವಿಭಕ್ತ ।
ಅಣುಮಹದ್ರೂಪದಿ ಹರಿವಾಸವಕ್ಕು ।
ವನಜ ಜಾಂಡಾಧಾರವಾಗಿಪ್ಪ ರೂಪವನ್ನು ।
ಮನುಜರ ದೇಹಾಶ್ರಯವಾಗಿಪ್ಪದೋ ।
ನೀನೊಲಿದು ಕೇಳುವುದು ಇದನೇವ ಅವಿಭಕ್ತ ।
ಘನರೂಪವೆಂಬೋರು ಜ್ಞಾನಿಗಳು ।
ಮುನಿಗಳ ಮತವಿದು ಸಂದೇಹ ಬಡಸಲ್ಲ ।
ಮನದಿ ಚಿಂತಿಸು ಈ ಶೂನ್ಯಾಭಿದನ ವ ।
ದನದ ಮೇಲೆ ವದನ ಶ್ರೋತ್ರದ ಮೇಲೆ ಶ್ರೋತ್ರ ನ-।
ಯನದ ಮೇಲೆ ನಯನ ಈ ಕ್ರಮದಿಂದಲಿ ।
ತನು ಸಮಸ್ತದಲ್ಲಿ ಹರಿ ತನ್ನ ಅಂಗದಿಂದ ।
ಅನುಸಾರವಾಗಿ ಆಶ್ರಯವಾಗಿಪ್ಪ ।
ಕ್ಷೋಣಿ ಒಳಗೆ ಈ ರೂಪ ಅನಪೇಕ್ಷದಿಂದ ।
ತನುವು ನಿಲ್ಲದಯ್ಯಾ ವಿಧಿಗಾದರೂ ।
ಇನಿತು ಸೊಬಗು ಪರಿಜ್ಞಾನ ರಹಿತರಾಗಿ ।

ವನಜ ಭವಾಂಡ ದಾನವಿತ್ತರೂನು ।
ವನಜನಾಭನೊಮ್ಮೆ ದೃಷ್ಟಿಲಿ ನೋಡನಯ್ಯ ।
ಅನುಮಾನ ಇದಕ್ಕಿಲ್ಲ ಶೃತ್ಯುಕ್ತವೊ ।
ವಿನಯದಿಂದಲಿ ಇದು ಸ್ಮರಿಸಿದ ಜನರಿಗೆ ।
ಜನುಮ ಜನುಮದ ಪಾಪ ಪ್ರಶಾಂತವೊ ।
ಬಿನಗು ಮೈಲಿಗೆ ಉಂಟೆ ಸ್ಪೃಷ್ಟಾಸ್ಪಷ್ಟದಿಂದ ।
ಅನುದಿನ ಪವಿತ್ರನು ಅಕೃತದಿಂದ ।
ಋಣತ್ರಯದಿಂದಲಿ ಮುಕ್ತರಾಗಿ ಸತತ ।
ದನುಜಾರಿ ಪುರವನ್ನೈದವರೊ ಮಲಿನ ।
ಮನುಜರ ಮನಸಿಗೆ ತೋರನೊಮ್ಮೆ ।
ನೀನೇ ಗತಿ ಎಂದು ನಂಬಿದವರ ।
ಮನಕೆ ಪೊಳೆವನು ಬಿಡದೆ ಮಾತರಿಶ್ವನ ದಯದಿ ।
ಮನುಜಾ ತಿಳೀ ಇದನೆ ಭಕುತಿಯಿಂದ ।
ಗುಣಗಣ ಪೂರ್ಣ ಗುರುವಿಜಯವಿಠಲರೇಯ ।
ಜನನ ಮರಣಗಳಿಂದ ದೂರ ಮಾಳ್ಪ ॥೩॥

ಅಟ್ಟತಾಳ

ಈ ರೀತಿಯಿಂದಲಿ ದೇಹಧಾರಿಯ ರೂಪವ ।
ಸಾರಿ ಸಾರಿಗೆ ತಿಳಿದು ಪೂಜಿಸು ಗುಪ್ತದಿ ।
ಶಾರೀರ ಉಪಯೋಗವಾದ ವಿಷಯ ಜಾಲ ।
ಹರಿಗೆ ಷೋಡಶ ಉಪಚಾರವೆಂದೆನ್ನು ।
ಆರಾರು ಮಾಡುವ ವಂದನ ನಿಂದೆಯು ।
ಶ್ರೀರಮಣನಿಗಿದು ಬಲು ಸ್ತೋತ್ರವೆಂದೆನ್ನು ।
ದಾರಾ ಪುತ್ರಾದಿ ಸಮಸ್ತ ಬಂಧೂ ವರ್ಗ ।
ಪರಿಚಾರಕರೆನ್ನು ಘನಮಹಾ ಮಹಿಮಂಗೆ ।
ಮೆರೆವದೆಲ್ಲವು ಹರಿ ಮೆರೆವುದೆಂದೆನ್ನು ।
ನಿರುತದಲಿ ಇದು ಮರೆಯದೆ ಮನದೊಳು ।
ಕರಚರಣಾದಿ ಯಾವದ್ದವಯವ ಚೇಷ್ಟಿಯ ।
ಗುರುಮುಖದಲಿ ತಿಳಿದು ಯಜ್ಞಕ್ರಮದಿಂದ ।
ನೀರಜನಾಭನಿಗರ್ಪಿಸು ಅವದಾನ ಪೂರ್ವಕ ।
ಮಾರಜನಕ ಗುರುವಿಜಯವಿಠ್ಠಲರೇಯ ।
ಕರವ ಪಿಡಿವನು ಇದನೇವೆ ಕೈಕೊಂಡು ॥೪॥

ಆದಿತಾಳ

ಬೊಮ್ಮೊಂಡದೊಳಗಿದ್ದ ಸ್ಥೂಲವಾದ ವಸ್ತುಗಳು।
ನಿಮ್ನವಾಗಿ ದೇಹದಲ್ಲಿ ಸೂಕ್ಷ್ಮವಾಗಿ ಉಂಟು ಕೇಳು ।
ಈ ಮಹಾಲಕ್ಷಣದಿಂದಲೇ ಕ್ಷೇತ್ರ ವೆಂದು ।
ಸನ್ಮಾನ್ಯವಾಗಿಪ್ಪದೊ ಜಡಗಳ ಮಧ್ಯದಲ್ಲಿ ।
ಆ ಮಹಾಮಹಿಮನಾದ ಕ್ಷೇತ್ರಜ್ಞನನ್ನು ಭಜಿಸಿ ।
ಜನ್ಮವ ನೀಗುವದು ಅವ್ಯವಧಾನದಿಂದ ವೈ-।
ಷ್ಯಮರಹಿತ ಗುರುವಿಜಯವಿಠ್ಠಲರೇಯ ।
ಸಮ್ಮುಖಿನಾಗುವನು ಈ ಪರಿ ತಿಳಿದರೆ ॥೫॥

ಜತೆ

ಸಕಲ ಸಾಧನ ಮಧ್ಯ ಉತ್ಕೃಷ್ಟವೆನಿಪುದು ।
ನಖಶಿಖ ಪರಿಪೂರ್ಣ ಗುರುವಿಜಯವಿಠಲ ವೊಲಿವ ।

ಸೋಮವಾರದ ಸುಳಾದಿ

ಧೃವತಾಳ

ನಿನ್ನ ಕಾಂಬುವದೆನಗೆ ನಿಖಿಳ ಸೌಭಾಗ್ಯಪ್ರಾಪ್ತಿ ।
ನಿನ್ನ ಕಾಂಬುವದೆ ನಿತ್ಯಾನಂದ ।
ನಿನ್ನ ಕಾಂಬುವದೆ ಶುಭದಿನ ವೆನಿಪದು ।
ನಿನ್ನ ಕಂಡದ್ದೆ ಪರಮ ಮಂಗಳವೊ ।
ನಿನ್ನ ಕಾಂಬುವದೆ ಘನ್ನ ಯಶಸ್ಸು ಎನಗೆ ।
ನಿನ್ನ ಕಾಂಬುವದೆ ನಿತ್ಯೋತ್ಸವ ।
ನಿನ್ನ ಕಾಂಬುವದೆ ದೇಹ ಪುಷ್ಟತ್ವ ಎನಗೆ ।
ನಿನ್ನ ಕಾಂಬುವದೇ ನಿಶ್ಚಿಂತವೊ ।
ನಿನ್ನ ಕಾಂಬವದೆ ಪರಮ ಪವಿತ್ರ ಎನಗೆ ।
ನಿನ್ನ ಕಾಂಬುವದೆ ಆರೋಗ್ಯವು ।
ನಿನ್ನ ಕಾಂಬುವದೆ ಗಂಗಾದಿ ಸ್ನಾನ ಎನಗೆ ।
ನಿನ್ನ ಕಂಡದ್ದನೇಕ ಜಪತಪ ಹೋಮವೊ ।
ನಿನ್ನ ಕಾಂಬುವದೆ ಅಪರಿಮಿತ ಅನ್ನದಾನ ।
ನಿನ್ನ ಕಂಡದ್ದನೇಕ ಕ್ರುತು ವಿಶೇಷ ।
ನಿನ ಕಾಂಬುದೆ ಷೋಡಶ ಮಹಾದಾನ ।
ನಿನ್ನ ಕಾಂಬುವದೆ ಸಕಲ ವ್ರತವೋ ।
ನಿನ್ನ ಕಾಂಬುವದೆ ತೇಜಸ್ಸು ಎನಗದು ।
ನಿನ್ನ ಕಾಂಬುವದೆ ಶೌರ್ಯ ಧೈರ್ಯ ।
ನಿನ್ನ ಕಾಂಬುವದೆ ಇಹ ಪರ ಸೌಖ್ಯವೆಲ್ಲ ।
ನಿನ್ನ ಕಂಡದ್ದು ಮುಕ್ತಿ ನಿಜಾವಿದೆ ।
ಅನ್ಯಥ ಇದಕ್ಕಿಲ್ಲ ನಿನ್ನ ಪಾದವೇ ಸಾಕ್ಷಿ ।
ಪನ್ನಗಶಯನ ಗುರುವಿಜಯವಿಠಲರೇಯ ।
ನಿನ್ನ ಕಾಂಬುವದೆ ಇಷ್ಟ ಎನಗೆ ॥೧॥

ಮಟ್ಟತಾಳ

ನಿನ್ನ ಕಾಣದ ದಿನ ಅಶುಭ ದುರ್ದಿನ ।
ನಿನ್ನ ಕಾಣದ ಜ್ಞಾನ ಅಡವಿಯ ರೋದನ ।
ನಿನ್ನ ಕಾಣದ ಭಕುತಿ ರೋಗಿಷ್ಟನ ಶಕುತಿ ।
ನಿನ್ನ ಕಾಣದ ವೈರಾಗ್ಯ ದಾರಿದ್ರನ ಭಾಗ್ಯ ।
ನಿನ್ನ ಕಾಣದ ಸುಖ ತ್ರೈತಾಪದ ದುಃಖ ।
ನಿನ್ನ ಕಾಣದ ಸ್ನಾನ ಬಧಿರ ಕೇಳುವ ಗಾನ ।
ನಿನ್ನ ಕಾಣದ ಜಪ ಚಂಡಾರ್ಕನ ತಾಪ ।
ನಿನ್ನ ಕಾಣದ ತಪ ನಿರ್ಗತ ಪ್ರತಾಪ ।
ನಿನ್ನ ಕಾಣದ ಆಚಾರ ಭಾಧಿಪ ಗ್ರಹಚಾರ ।
ನಿನ್ನ ಕಾಣದ ನರ ಕ್ರಿಮಿ ಕೀಟ ವಾನರ ।
ನಿನ್ನ ಕಾಣದ ಕರ್ಮ ಅರಿಯದಿಪ್ಪ ಮರ್ಮ ।
ನಿನ್ನ ಕಾಣದ ಪುಣ್ಯ ಗತವಾದ ಧಾನ್ಯ ।
ನಿನ್ನ ಕಾಣದ ಯಾತ್ರ ಅಂಧಕನ ನೇತ್ರ ।
ನಿನ್ನ ಕಾಣದ ಪಾತ್ರ ಕಾಣದಿಪ್ಪ ನೇತ್ರ ।
ನಿನ್ನ ಕಾಣದೆ ಬರಿದೆ ಪರಿ ಪರಿ ಸಾಧನ ।
ಅನಂತ ಮಾಡಿದರೂ ಅವಗಿಲ್ಲ ಸುಖಸ್ಪರ್ಶ ।
ಚಿನ್ಮಯ ಮೂರ್ತಿ ಗುರುವಿಜಯವಿಠಲರೇಯ ।
ನಿನ್ನ ಕಾಂಬುವದೆಲ್ಲ ಕರ್ಮಕ್ಕೆ ಸಾರ್ಥಕವೊ ॥ ೨ ॥

ತ್ರಿವಿಡಿತಾಳ

ನಿನ್ನ ಕಂಡವ ಸಕಲ ಸಾಧನ ಮಾಡಿದವ ।
ನಿನ್ನ ಕಂಡವನೇ ನಿರ್ಮಲನೋ ।
ನಿನ್ನ ಕಂಡವಗುಂಟೆ ಕಲಿಕೃತ ಅಘುವಿನ್ನು ।
ನಿನ್ನ ಕಂಡವನೆ ಜೀವನ್ಮುಕ್ತ ।
ನಿನ್ನ ಕಂಡವರಲ್ಲಿ ಸಕಲ ಸುರರು ಉಂಟು ।
ನಿನ್ನ ಕಾಂಬುವ ದೇಹ ಸುಕ್ಷೇತ್ರವೊ ।
ನಿನ್ನ ಕಾಂಬುವ ತನುವು ಪಾವನ ವೆನಿಪುದು ।
ನಿನ್ನ ಕಾಂಬುವದೆ ವಿಮಲ ಕೀರ್ತಿ ।
ನಿನ್ನ ಕಾಂಬುವ ನರಗೆ ನರಕದ ಭಯವುಂಟೆ ।
ನಿನ್ನ ಕಾಂಬುವದೇ ಮಾನ್ಯತೆಯೊ ।
ಉನ್ನತ ಮಹಿಮ ಗುರುವಿಜಯವಿಠ್ಠಲರೇಯ ।
ನಿನ್ನ ಕಾಂಬುವದೇ ನಿಖಿಲ ಸುಖವೊ ॥ ೩ ॥

ಅಟ್ಟತಾಳ

ನಿನ್ನನ್ನು ಕಾಣದೆ ಧನ್ಯವ್ಯನಾಗೇನೆಂಬೋದು ।
ಖಿನ್ನ ಮಾತಲ್ಲದೆ ಸಮ್ಮತ ವಲ್ಲವು ।
ಉನ್ನಂತ ಗುಣನಾರಿ ಪತಿಯುಕ್ತಳಾಗಲು ।
ಸನ್ಮಾನ್ಯಳೆನಿಪಳು ಸಂತತ ಸುಖದಿ ।
ಅನಂತ ರೂಪನ್ನ ಕಾಂಬುವ ಜನರೆಲ್ಲ ।
ಚಿನ್ಮಯರೆನಿಸಿ ಶುಭದಿ ಶೋಭಿಸುವರು ।
ಪನ್ನಗಾರಿ ವಾಹ ಗುರುವಿಜಯವಿಠ್ಠಲರೇಯ ।
ನಿನ್ನಿಂದ ಭಕುತರು ವಿಚ್ಛಿನ್ನ ದಾರಿದ್ರರು ॥ ೪ ॥

ಆದಿತಾಳ

ನಿನ್ನ ಕಾಂಬುವದೆ ಜನ್ಮಕ್ಕೆ ಸಫಲವು ।
ನಿನ್ನ ಕಾಂಬುವಗೆ ಪುನರಪಿ ಜನ್ಮವಿಲ್ಲ ।
ಅನಾದಿ ಪ್ರಾರಬ್ಧ ಸಂಬಂಧ ನಿಮಿತ್ತ ।
ಜನ್ಮವು ಒದಗಲು ಅವಗಿಲ್ಲ ಲೇಪವು ।
ನಿನ್ನ ಕಾಂಬುವನ್ನ ಸುರರೆಲ್ಲ ಮನ್ನಿಪರು ।
ನಿನ್ನ ಕಾಂಬುವದೆ ಷಡುರಸ ಭೋಜನವು ।
ಉನ್ನತ ಭಕ್ತರಿಗೆ ಅನ್ನವೆ ನೀವೆ ನೆನಿಪ ।
ಅನ್ನಮಯ ದೇವ ಗುರುವಿಜಯವಿಠಲರೇಯ ।
ನಿನ್ನ ಕಾಂಬುವಂತೆ ಅಭಿಮುಖನಾಗುವದು ॥೫॥

ಜತ್ತೆ

ನಿನ್ನ ಕಾಂಬುವದೇ ನಿತ್ತೈಶ್ವರ್ಯವೊ ದೇವಾ ಪ್ರ ।
ಸನ್ನ ನಾಗುವದು ಗುರುವಿಜಯವಿಠ್ಠಲರೇಯ ॥೬॥

ಮಂಗಳವಾರದ ಸುಳಾದಿ

ಧೃವತಾಳ

ಮಿತ್ರನು ಎಂದು ನಿನ್ನ ಮನದಿ ನಂಬಿದದಕ್ಕೆ ।
ಉತ್ತಮ ಉಪಕಾರ ಮಾಡಿದಯ್ಯಾ ।
ಶತ್ರುಗಳಂತೆ ನಿಂದು ಬಹಿರಂತ ರಂಗದಲ್ಲಿ ।
ಕತ್ತಲೆ ಚರರಿಗೆ ಸಹಾಯನಾಗಿ ।
ನಿತ್ಯ ದುಃಖಗಳುಣಿಸಿ ಎಷ್ಟು ಕೂಗಿದರು ।
ನೇತ್ರದಿ ನೋಡದಲೆ ಇರುವ ಬಗೆಯೋ ।
ಮಿತ್ರರ ಲಕ್ಷಣವೆ ಅಥವಾ ಶತೃತ್ವದ ಸೊಬುಗೆ ।
ಎತ್ತಣದೋ ಇದನು ತೋರದೆನಗೆ ।
ಕರ್ತೃ ನಿನ್ನಲ್ಲಿ ದೋಷ ಎಂದೆಂದು ಕೂಡದಾಗಿ ।
ನಿಸ್ತೈಗುಣ್ಯನೆಂದು ಶ್ರುತಿ ಸಾರಿತು ಸ-।
ರ್ವತ್ರ ಸಮನಾದ ಹರಿ ನೀನು ಜೀವಕಾಲ ಪ್ರ ।
ಕೃತಿ ಅನುಸರಿಸಿ ಸುಖ ದುಃಖ ।
ಹೊತ್ತು ಹೊತ್ತಿಗೆ ತಂದು ತುತ್ತು ಮಾಡಿ ಉಣಿಸಿ ।
ಕೀರ್ತ್ಯಾಪ ಕೀರ್ತಿಗಳಜಾದಿಗಳಿಗೆ ।
ಇತ್ತು ಪೊರೆವಿ ಎಂಬ ಕಾರಣದಿಂದ ನಿನಗೆ ।
ಯುಕ್ತವಾಗದಯ್ಯಾ ದೋಷವಿನ್ನು ।
ಈ ತೆರವಾದ ಬಗೆಯಿಂದ ಎನ್ನ ಕರ್ಮದಂತೆ ದು ।
ಷ್ಕೃತ್ಯಗಳುಂಬೆನೆಂದು ನಿಶ್ಚೈಸುವೆನು ಧಾ ।
ರಿತ್ರಿ ಒಳಗೆ ಅಶಕ್ತರಾದವರೆಲ್ಲ ।
ಶಕ್ತರಾದವರನ್ನ ಆಶ್ರೈಯಿಸೆ ।
ಅತ್ಯಭಿಮಾನದಿಂದ ಪೊರೆಯದಿರಲು ಅವ ।
ಕೀರ್ತಿ ಐದುವನೆಂತು ಮಾನ್ಯವಾಗಿ ತಾ- ।
ಪತ್ರಯ ಕಳಿಯದಿರೆ ಅನುಸಾರ ಮಾಳ್ಪದೇಕೆ ।
ಕೃತ್ಯಾಭಿಮಾನಿಗಳ ಸುರರೊಡಿಯಾ ಮುಕ್ತಾ ।
ಮುಕ್ತ ರಾಶ್ರಯ ಗುರು ವಿಜಯ ವಿಠ್ಠಲರೇಯ ।
ಭಕ್ತ ವತ್ಸಲ ದೇವ ಮಹಾನುಭಾವ ॥೧॥

ಮಟ್ಟತಾಳ

ಅನಾದಿ ಕರ್ಮವನು ಅನುಭವ ಮಾಡುವದು ।
ಪ್ರಾಣಾದ್ಯಮರರಿಗೆ ತಪ್ಪುವದೇ ಎಂದು ।
ಜಾಣತನದಲಿಂದ ಜಾರಿ ಪೋಗುವದೊಳಿತೆ ।
ಶ್ರೀನಾಥ ನಿನ್ನ ಪಾದ ಸಾರಿದ ಜನಕೆ ।
ಅನೇಖ ಜನ್ಮದ ಪಾಪ ತಕ್ಷಣದಿಂದಲ್ಲೇವೆ ।
ವಿನಾಶವಾಗುವದೆಂದು ಶ್ರುತಿಸಾರುತಲಿದಕೋ ॥
ದೀನರಾಗಿ ನಿನ್ನ ಸ್ತುತಿಪರು ಸುರರೆಲ್ಲ ।
ಎನಗಿದ್ದ ಕರ್ಮವನು ಕ್ಷೀಣ ವೈದಿಸದಿರಲು ।
ವಿನಯಯಿಂದಲಿ ನಿನಗೆ ಬೇಡಿಕೊಂಬುವದೇಕೆ ।
ಪ್ರಾಣನಾಥ ಗುರುವಿಜಯ ವಿಠ್ಠಲರೇಯ ।
ನೀನು ಪ್ರೀಣನಾಗುತಿರಲು ನಿಲ್ಲುವದೇ ದೋಷ ॥೨॥

ತ್ರಿವಿಡಿತಾಳ

ವೆಂಕಟನೆಂಬುವದು ವ್ಯವಹಾರ ತೋರುತಿದೆ ।
ಪಂಕಜಾಕ್ಷನೆ ಇನಿತು ನಡತೆ ಇಂದ ।
"ಯತ ತೋಪಿ ಹರೇಃ ಪದ ಸಂಸ್ಮರಣೆ ।
ಸಕಲಂಹ್ಯಗಮಾಶುಲಯಂ ವ್ರಜತಿ"
ಎಂಬೋಕ್ತಿಗೆ ಕಳಂಕ ಬಾರದೇನೊ ಈ ತೆರ ನುಡಿದರೆ ।
ಶಂಕರ ನೆಂಬೊ ನಾಮ ನುಡಿಯಲ್ಯಾಕೆ ।
ನಿಖಿಳಾ ಘೌಘು ವಿನಾಶಕ ನೆಂಬೊದೇನೋ ।
ಮಂಕುಜನರ ಪಾಪ ಕಳೆಯದಿರೆ ।
"ಯಂಕಾಮಯೆ ತಂತ ಮುಗ್ರಂಕೃಣೋಮಿ" ಎಂಬ ।
ಬಿಂಕದ ಉಕುತಿಗೆ ಘನ್ನತ್ಯಾಕೆ ।
ಸಂಕಟ ಹರ ಗುರುವಿಜಯವಿಠ್ಠಲ ನಿನಗೆ ।
ಲಂಕಾರವಾಗದಯ್ಯಾ ಇನಿತು ನೋಡೆ ॥೩॥

ಅಟ್ಟತಾಳ

ಮಾಡಿದ ಕರ್ಮವು ಕ್ಷೀಣ ವೈದಸದಿರಲು ।
ನಾಡೊಳಗೆ ಪುಟ್ಟಿ ಅನಭವಿಸಲಿ ಎನ್ನೆ ।
ಯೂಢವಾದ ಕಲ್ಪ ಕಲ್ಪ ತಿರುಗಿದರೂ ।

ಗಾಢವಾದ ಕರ್ಮ ನಾಶವಾಗದು ಕೇಳೋ ।
ಈಡು ಇಲ್ಲದಿಪ್ಪ ಸೌಖ್ಯದಾಯಕ ಮುಕ್ತಿ ।
ಪ್ರೌಢರಾದವರಿಗೆ ದುರ್ಲಭವೆ ಸರಿ ।
ರೂಢಿಯ ಜನಕಿನ್ನು ಪೇಳುವದ್ಯಾತಕೊ ।
ಗೂಢಕರುಣಿ ಗುರುವಿಜಯವಿಠ್ಠಲ ಎಂಬೋದು ।
ರೂಢಿಯೆ ಸರಿ ಮತ್ತೆ ಯೋಗ ಎನ್ನಲ್ಯಾಕೆ ॥೪॥

ಆದಿತಾಳ

ವಿನಯದಿಂದಲಿ ಒಮ್ಮೆ ಹರಿ ಎಂದು ಸ್ಮರಿಸಲು ।
ಜನಮ ಜನ್ಮದ ಪಾಪ ಪರಿಹಾರವಾಗುವೋವು ।
ಅನುನಯದಿ ಮತ್ತೊಮ್ಮೆ ಅಚ್ಯುತನೆಂದು ನೆನಿಯೆ ।
ಮನದಲ್ಲಿ ತೋರಿ ನೀನು ಆನಂದಬಡಿಸುವಿ ।
ಘನ್ನಮಹಿಮನೆ ನಿನ್ನ ಮೂರನೆ ಖ್ಯಾಪಿ ನೆನಿಯೆ ।
ಅನಾದಿಯಿಂದ ಬಂದ ಪ್ರತಿಬಂಧ ದೂರಮಾಡಿ ।
ಆನಂದಪ್ರದವಾದ ಸ್ಥಾನವನ್ನು ಐದಿಸುವಿ ।
ಚಿನುಮಯನೆ ನಿನ್ನ ನಾಲ್ಕನೆಯ ಭಾರಿ ನೆನೆಯೆ ।
ಋಣವನ್ನು ತೀರಿಸುವಿ ಉಪಾಯವಿಲ್ಲ ನಿನಗೆ ।
ಅನುಗಾಲ ನಿನ್ನ ಪಾದ ಭಜಿಸಿದ ಭಕ್ತರಿಗೆ ।
ಅನುಸಾರವಾಗಿಪ್ಪ ಅಳುಕಂದಿ ಅಳುಕಂದಿ ।
ಅನುಮಾನ ಇದಕ್ಕಿಲ್ಲ ಬಲಿಯೇ ಇದಕೆ ಸಾಕ್ಷಿ ।
ಇನಿತು ನಿನ್ನಮಹಿಮೆ ಶೃತಿ ಸ್ಮೃತಿ ವರಲುತಿರೆ ।
ಎನಗಿದ್ದ ದುಷ್ಕರ್ಮ ಪರಿಹಾರ ಮಾಡದಿರಲು ।
ಘನವಾದ ಮಹಿಮೆಯು ಲೌಕಿಕವಾಗದೇನೊ ।
ಸನಕಾದಿಮುನಿವಂದ್ಯ ಗುರುವಿಜಯವಿಠ್ಠಲರೇಯಾ ।
ಮನನಕ್ಕೆ ತಂದುಕೋ ಎನ್ನಯ ಬಿನ್ನಪವ ॥೫॥

ಜತ್ತೆ

ಭಕುತಿ ಇಲ್ಲದೆ ಬರಿದೆ ಸಥೆಯಿಂದ ಬಿನ್ನೈಸಿದೆ ।
ಉಕುತಿ ಲಾಲಿಸು ಗುರುವಿಜಯವಿಠ್ಠಲರೇಯ ।

ಮಟ್ಟತಾಳ

ಕಾಳಿ ಸರ್ಪನು ನಿನ್ನ ಕಟ್ಟಿ ಬಿಗಿಯೆ ಅವನ ।
ಕೀಳು ನಡೆತೆಯನ್ನು ನೋಡದಲೆ ಕರುಣದಲಿ ।
ಮೇಲಾದಾನುಗ್ರಹ ಮಾಡಿದಿ ಮುದದಿಂದ ।
ಫಾಲಲೋಚನ ಸುರಪ ಗುರು ಸತಿ ಭೃಗುಭೀಷ್ಮ ।
ಶೀಲ ಭಕುತರೆಲ್ಲ ಕಲಿ ಕಲ್ಮಷದಿಂದ ।
ಕಾಲನಾಮಕ ನಿನ್ನ ಬಂಧಕ - ಶಕುತಿಯಲಿ ।
ವ್ಯಾಳಿ ವ್ಯಾಳಿಗೆ ಅಪರಾಧವೆ ಮಾಡಿದರೂ ।
ಪಾಲಿಸಿದಿ ಹೊರ್ತು ಪ್ರದ್ವೇಷ ಮಾಡಿದಿಯಾ ।
ಜಾಲ ಅಘುವ ಮಾಡಿ ದೇಹಿ ದೇಹಿ ಎನಲು ।
ತಾಳುವರಲ್ಲದಲೆ ಛಿದ್ರಗಳೆಣಿಸುವರೆ ।
ಮೂಲ ನೀನೆ ಸುಖದುಃಖಾನುಭವಕ್ಕೆ ।
ಮೂಲ್ಲೋಕಾಧಿಪ ಗುರುವಿಜಯವಿಠ್ಠಲ ನಿನ್ನ ।
ಆಳುಗಳೊಳಗೊಬ್ಬ ಅಧಮನು ನಾನೇವೆ ॥೨॥

ತ್ರಿವಿಡಿತಾಳ

ವಿದೇಶದವನಾಗಿ ಪಥದೊಳು ಒಂದು ಕ್ಷಣ ।
ಆದರ ಪರಸ್ಪರವಾದ ಭಿಡಿಯಾ ।
ಹೃದಯದೊಳು ಮರಿಯದೆ ಸ್ಮರಿಸುವನ್ಯೊಮ್ಮಿಗನ್ನ ।
ಪದುಮನಾಭನೆ ನಿನ್ನ ನಿರ್ಭಿಡಿಯತನಕೆ-।
ಆದಿ ಅಂತ್ಯವಿಲ್ಲ ಆಶ್ಚರ್ಯ ತೋರುತಿದೆ ।
ಉದಧಿ ಪೋಲುವ ದಯಪೂರ್ಣನೆಂದು ।
ಸದಮಲವಾಗಿ ನಿನ್ನ ಧೇನಿಸಬೇಕೆಂತೊ ।
ವಿದೂರನೆನಿಪ ದೋಷರಾಶಿಗಳಿಗೆ ।
ಪದೋ ಪದಿಗೆ ಗುರು ದ್ರೋಹಮಾಡಿದಿ ಎಂದು ಅ-।
ವಧಿ ಇಲ್ಲದಲೆ ಹಂಗಿಸುವದು ।
ಮೋದವಾಗಿ ನಿನಗೆ ತೋರುತಲಿದೆ ನಿನ್ನ ।
ಚದುರಾತನಕೆ ನಾನು ಎದುರೇನೋಡಾ ।
ಪದುಮಸಂಭವ ಮುಖ್ಯ ದಿವಿಜರು ಸ್ವತಂತ್ರದಿ ।
ಪದವಾಚಲಣದಲ್ಲಿ ಸಮರ್ಥರೆ ।
ಹೃದಯದೊಳಗೆ ವಾಸವಾಗಿದ್ದ ಹರಿ ನಿನ್ನ ।
ಚೋದನದಂತೆ ನಡೆವ ಆವಕಾಲ ।
ಇದು ಎನ್ನ ಮಾತಲ್ಲ "ಯಥಾದಾರು ಮಯಿಯೋಷಾ"।

ಶುದ್ಧ ಭಾಗವತೋಕ್ತಿ ಪ್ರಮಾಣದಂತೆ ।
ಅದುಭೂತಬಿಂಬ ನೀನು ಪ್ರತಿಬಿಂಬ ಜೀವ ನಿನಗೆ ನೀ ।
ಮುದದಿ ಮಾಡಿಸದಿಪ್ಪ ಕಾರ್ಯವೆನಗೆ ।
ಒದಗಲು ಪೂರ್ವೋಕ್ತವಾದ ಪ್ರಮಾಣಗಳಿಗೆ ।
ಅಧಿಕಾರ ಸಿದ್ಧಾಂತ ಬರುವದೆಂತೋ ।
ಉದರಗೋಸುಗವಾಗಿ ಮಾಡಿದವನಲ್ಲ ।
ಉದಯಾಸ್ತಮಾನ ಎನ್ನ ಬಳಲಿಪಾದು ।
ಇದು ಧರ್ಮವಲ್ಲ ನಿನಗೆ ಕರವ ಮುಗಿದು ನಮಿಪೆ ।
ಪದಕೆ ಬಿದ್ದವನ ಕೂಡ ಛಲವ್ಯಾತಕೆ ।
ಬದಿಯಲ್ಲಿ ಇಪ್ಪ ಗುರು ವಿಜಯ ವಿಠ್ಠಲರೇಯ ।
ಸದಾಕಾಲದಲ್ಲಿ ನೀನೇ ಗತಿ ಎಂದು ಇಪ್ಪೆ ನೋಡಾ ॥೩॥

ಅಟ್ಟತಾಳ

ಬಲವಂತವಾಗಿದ್ದ ಪೂರ್ವದ ಕರ್ಮವು
ತಲೆಬಾಗಿ ಉಣಬೇಕು ಉಣದಿದ್ದರೆ ಬಿಡದು ।
ಜಲಜನಾಭನೆ ನಿನ್ನ ಸಂಕಲ್ಪ ಇನಿತೆಂದು ।
ತಿಳಿದು ಈ ದೇಹದ ಅಭಿಮಾನವಿದ್ದರೂ ।
ತಲೆದೂಗಿ ಸುಮ್ಮನೆ ಇರಲಾಗಿ ಎನ್ನಿಂದ ।
ವಲ್ಲೆನೆಂದರು ಬಿಡದು ಎಲ್ಲಿ ಪೊಕ್ಕರನ್ನ ।
ನಳಿನಾಕ್ಷ ನೀನೆವೆ ಘನ್ನಕರುಣವ ಮಾಡಿ ।
ವಿಲಯಗೈಸುವ ಉಪಾಯಗಳಿಂದ ।
ನೆಲೆಯಾಗಿ ನಿಂತಿದ್ದ ಪಾಪಾರಾಶಿಗಳನ್ನು ।
ಸಲೆ ಇಂದಿನ ದಿನಕ್ಕೆ ಸರಿ ಹೋಯಿತು ಎಂದು ।
ಕುಲಪಾವನ ನೀನೆ ಪೇಳಿದ ಮಾತಿಗೆ ।
ಹಲವು ಬಗೆಯಿಂದ ಯಿನ್ನು ಬಳಲಿಪದ್ಯಾತಕ್ಕೆ ।
ಮಲತ ಮಲ್ಲರ ಗಂಡ ಗುರುವಿಜಯವಿಠ್ಠಲರೇಯಾ ।
ಖಳದರ್ಪ ಭಂಜನ ಕೃಪೆಯಿಂದ ನೋಡೋದು ॥೪॥

ಆದಿತಾಳ

ಅನುಭವದಿಂದ ಇದು ತೀರಿಪೆನೆಂದೆನೆ ।
ವನಜ ಭವಕಲ್ಪಕ್ಕೆ ಎನ್ನಿಂದಾಹದಲ್ಲ ।
ಸನಕಾದಿ ಮುನಿವಂದ್ಯ ನೀನೇವೆ ದಯದಿಂದ ।
ಋಣವನ್ನು ತೀರುಪುದು ಆಲಸ್ಯಮಾಡದಲೆ ।
ತೃಣದಿಂದ ಸಾಸಿರ ಹಣವನ್ನು ತೀರಿದಂತೆ ।

ಶಣಿಸಲು ಬೇಡ ಇನ್ನು ಅಪರಾಧ ಮೊನೆ ಮಾಡಿ ।
ಕ್ಷಣಕ್ಷಣಕೆ ಇದು ಬೆಳೆಸುವದುಚಿತವೆ ।
ಮುನಿಮನ ಮಂದಿರ ಗುರುವಿಜಯವಿಠ್ಠಲರೇಯ ।
ನಿನ್ನವನೆಂದರೆ ಎನಗಾವ ದೋಷ ಉಂಟು ॥೫॥

ಜತೆ

ಅಹಿತ ಮಾಡುವನಲ್ಲ ಭಕುತರ ಸಮೂಹಕ್ಕೆ ।
ಲೋಹಿತಾಕ್ಷ ಗುರುವಿಜಯವಿಠ್ಠಲರೇಯ ॥೬॥

ಗುರುವಾರದ ಸುಳಾದಿ

ಧ್ರುವತಾಳ

ಘನದಯಾನಿಧಿಯಾದ ಗುರು ರಾಘವೇಂದ್ರ ನಿಮ್ಮ ।
ವನಜ ಪಾದಯುಗಕೆ ನಮೊ ನಮೊ ।
ಜನುಮಾರಭ್ಯವಾಗಿ ಅಭಿನಮಿಸದಲಿಪ್ಪ ।
ಮನುಜನ ಅಪರಾಧ ವೆಣಿಸದಲೆ ।
ವನಧಿ ಪೋಲುವ ಕರುಣಿ ಗೋವತ್ಸ ನ್ಯಾಯದಿಂದ ।
ನಿನಗೆ ನೀನೇ ಬಂದು ಸ್ವಪ್ನದಲ್ಲಿ ।
ಸನಕಾದಿ ಮುನಿಗಳ ಮನನಕ್ಕೆ ನಿಲುಕದ ।
ಇನಕೋಟಿ ಭಾಸ ವೇದೇಶ ಪ್ರಮೋದತೀರ್ಥ ।
ಮುನಿಗಳಿಂದ ಕೂಡಿ ಸಂದರುಶನವಿತ್ತು ।
ವಿನಯೋಕ್ತಿಗಳ ನುಡಿದ ಕೃತ್ಯದಿಂದ ।
ಆನಂದವಾಯಿತು ಅಘುದೂರನಾದೆನಿಂದು ।
ದನುಜಾರಿ ಭಕುತರ ಮಣಿಯೆ ಗುಣಿಯೆ ।
ಎಣೆಗಾಣೆ ನಿಮ್ಮ ಕರುಣಕಟಾಕ್ಷ ವೀಕ್ಷಣಕ್ಕೆ ।
ಅನುಪಮ ಮಹಿಮನೆ ಅನಿಳ ಪ್ರಿಯಾ ।
ಗುಣಗಣ ಪರಿಪೂರ್ಣ ಗುರುವಿಜಯವಿಠ್ಠಲ ನಿಮ್ಮ ।
ಘನವಾದ ಬಲದಿ ಎನಗೆ ಸುಳಿದ ನಿಂದು ॥೧॥

ಮಟ್ಟತಾಳ

ಸುಖ ತೀರ್ಥರ ಮತವೆಂದ್ಯಂಬಾಧ್ವಜವನ್ನು ।
ವಿಖನ ಸಾಂಡದ ಮಧ್ಯ ಪ್ರತಿಯಿಲ್ಲದೆ ಮೆರೆಯೆ ।
ಪಖರಹಿತವಾದ ಪಕ್ಷಿಯು ತನ್ನಯ ।
ಪಖ ಚಿಸ್ತಿಯ ಜನಿತ ಮಾರುತನಿಂದಲಿ ಧ್ವಜವ ।

ಪ್ರಕಟದಿ ಚರಿಸುವ ಯತ್ನದಿಂದಲಿ ದುರುಳ ।
ಸಕುಟಿಲರಾದ ಆ ವಿದ್ಯಾರಣ್ಯ ।
ಮುಖರೆಲ್ಲರು ಬರಲು ಅಮಸ್ಥಿತ ನಿಶ್ಚಯದಿ ।
ಮುಖಶತಜ ನೆನಿಪ ಜಯರಾಯಾಚಾರ್ಯ ।
ಪ್ರಕಟ ಗ್ರಂಥಗಳೆಂಬ ಪಾಶಗಳಿಂದಲ್ಲಿ ।
ಯುಕುತಿಯಿಂದಲಿ ಬಿಗಿದು ವೀರಧ್ವನಿಯ ಗೈಯೆ ।
ಉಕುತಿಗೆ ನಿಲ್ಲದಲೆ ಮೊಲದಂತೆ ಜರಿದು ।
ದಿಕ್ಕು ವಿದಿಕ್ಕಿನಲ್ಲಿ ಪಲಾಯನರಾಗಿ ।
ತ್ಯಕತ ಲಜ್ಜೆಯಿಂದ ಹತವಾಶೇಷ್ಯ ।
ಸಾಕುಂಠಿತವಾದ ಬಲವೀರ್ಯನು ಮೇರು ।
ಶಿಖರ ವೆತ್ತುವೆನೆಂಬೊ ಸಹಸದಂದಲಿ ।
ವಿಕಟ ಮತಿಯುಕ್ತ ದುರುಳರು ರೋಷದಲಿ ಕು ।
ಯುಕುತಿಗಳಿಂದ ಸಂಚರಿಸುತ ಬರಲು ।
ಲಕುಮಿಪತಿಯ ನೇಮ ತಿಳಿದ ಪ್ರೌಢನೀನು ।
ಈ ಖಂಡದಿ ಬಂದು ದ್ವಿ ಜನ್ಮವ ಧರಿಸಿ ।
ಪ್ರಖ್ಯಾತವಾದ ನ್ಯಾಯಾಮೃತವನ್ನು ।
ತರ್ಕತಾಂಡವ ಚಂದ್ರಿಕ ಪರಿಮಳ ಮೊದಲಾದ ।
ಮಿಕ್ಕಾದ ಗ್ರಂಥವೆಂತೆಂಬ ವಜ್ರದಲಿ ದು ।
ರುಕುತಿಳೆಂಬಂಥ ಗಿರಿಗಳ ಛೇದಿಸಿ ।
ಈ ಕುಂಭೀಣಿ ಮಧ್ಯ ಪ್ರತಿ ಇಲ್ಲದೆ ಮೆರೆದೆ ।
ಭಕುತರಾಗ್ರೇಸರನೆ ಭೂ ವಿಭುದರ ಪ್ರೀಯ್ಯಾ ।
ನಖ ಶಿಖ ಪರಿಪೂರ್ಣ ಗುರುವಿಜಯವಿಠ್ಠಲ ನಿಮ್ಮ ।
ಭಕುತಿಗೆ ವಶನಾಗಿ ಇತ್ತಿಹ ಕೀರ್ತಿಯನು ॥೨॥

ತ್ರಿವಿಡಿತಾಳ

ಕಲಿಯುಗದಲ್ಲಿ ಜನರು ಕಲಿ ಕಲ್ಮಷದಿಂಧ ।
ಬಲವಂತವಾದ ತ್ರಿವಿಧ ತಾಪಗಳನ್ನು ।
ವಿಲಯಗೈಸುವ ಉಪಾಯವ ನರಿಯದೆ ।
ಮಲಯುಕ್ತವಾದ ಭವಶರಧಿಯಲ್ಲಿ ।
ನೆಲೆಯಾಗಿ ಮಗ್ನರಾಗಿ ನಿವೃತ್ತಿವರ್ತ್ಮವನ್ನು ।
ತಿಳಿಯದಲೆ ದುಃಖಬಡುವ ಸುಜನಾ ।
ವಳಿಗೆ ತಾರಕನಾಗಿ ಈ ನದಿಯ ತೀರದಲಿ ।
ನಿಲಯವಲ್ಲದೆ ನಿನಗೆ ಅನ್ಯಕೃತ್ಯಗಳಿಲ್ಲ ।
ನಳಿನ ಸಂಭವ ಜನಕ ಗುರುವಿಜಯವಿಠ್ಠಲರೇಯ ನಿನಗೆ ।
ಒಲಿದಿಪ್ಪಾದಿಕಾಧಿಕವಾಗಿ ಬಿಡದೆ ॥೩॥

ಅಟ್ಟತಾಳ


ಸೂಚನೆ ಮಾಡಿದ ಸೊಬಗಿನ ತೆರೆದಂತೆ ।
ಯೋಚನೆಯಾತಕ್ಕೆನ್ನನು ಉದ್ಧರಿಪದಕ್ಕೆ ।
ಉಚ್ಚ ಜ್ಞಾನಾನಂದ ಬಲವೀರ್ಯನು ನೀನು ।
ನೀಚವಾದ ದೇಹ ಧಾರಣವನ್ನು ಮಾಡಿ ಅ-।
ನುಚಿತವಾಗಿದ್ದ ಕಾಮ ಕ್ರೋಧಂಗಳು ।
ಆಚರಿಣೆಯ ಮಾಳ್ಪ ಅಧಮನಾದವ ನಾನು ।
ಸುಚರಿತ್ರನಾಗಿ ಶುಚಿಯಾದ ಮನುಜಂಗೆ ।
ನೀಚ ಅಶುಚಿಯಾದ ನರನು ಅಧಿಕ ನೆಂತೊ ।
ಭೂಚಕ್ರದಲಿ ಅವರ ದೇಹ ತೆತ್ತವನಾಗಿ ।
ಆಚರಿಸದೆ ಬಲು ಹೀನ ಕೃತ್ಯಂಗಳು ।
ಸೂಚನೆ ಮಾಡಿದ್ದು ಸೊಬಗು ನೋಡದಲೆ ।
ಯೋಚನೆ ಮಾಡಿದ್ದು ಸಾರ್ಥಕ ಮಾಡಿ ವಿ ।
ಮೋಚನೆ ಮಾಡುವದು ಭವಬಂಧದಲಿಂದ ।
ಶ್ರೀ ಚಕ್ರಪಾಣಿ ಗುರುವಿಜಯವಿಠ್ಠಲನ್ನ ।
ಯೋಚನೆ ಮಾಡುವ ಯೋಗವ ಬೋಧಿಸು ॥೪॥

ಆದಿತಾಳ

ಪರಿಶುದ್ಧವಾದ ನಿಮ್ಮ ಭಕುತಿಗೆ ವಶನಾಗಿ ।
ಹರಿತನ್ನ ಪರಿವಾರ ಸಮೇತನಾಗಿ ನಿಂದು ।
ಮೊರೆ ಹೊಕ್ಕ ಜನರಿಗೆ ಪರಿಪೂರ್ಣ ಸುಖವಿತ್ತು ।
ಪರಿಪರಿ ಕೀರ್ತಿಗಳು ತಂದೀವ ನಿಮಗಿಂದು ।
ಪರಮಾರ್ತನಾಗಿ ತವಪಾದ ಸಾರಿದೆನು ।
ದೂರ ನೋಡದಲೆ ಕರುಣ ಮಾಡಿ ವೇಗ ।
ಸುರರಿತ್ತ ಶಾಪದಿಂದ ಕಡಿಗೆ ಮಾಡಿ ಎನ್ನ ಹೃ ।
ತ್ಸರಸಿಜದಲ್ಲಿ ಹರಿಪೊಳೆವಂತೆ ಮಾಡುವದು ।
ಪರಮ ಕೃಪಾನಿಧೆ ಗುರುವಿಜಯವಿಠ್ಠಲನ್ನ ।
ಶರಣರ ಅಭಿಮಾನಿ ಔದಾರ್ಯ ಗುಣಮಣಿ ॥೫॥

ಜತೆ

ಗುರು ಕುಲ ತಿಲಕನೆ ಗುರುರಾಘವೇಂದ್ರಾಖ್ಯ ।
ಸುರಕಲ್ಪತರು ಗುರುವಿಜಯವಿಠ್ಠಲಪ್ರೀಯ್ಯಾ ॥



ಶ್ರೀ ಶೇಷದಾಸರ ಅಷ್ಟಕದ ರಚನೆಗೆ ಮೂಲ ಪ್ರೇರಕರಾದ ಶ್ರೀ
ಮಂತ್ರಾಲಯ ಪ್ರಭುಗಳು

ಶುಕ್ರವಾರದ ಸುಳಾದಿ

ಧೃವತಾಳ

ಇಂದು ಮುಖಿಯೆ ನಿನ್ನ ಸಂದರುಶನದಿಂದಾ ।
ನಂದವಾಯಿತು ಅರವಿಂದ ನಯನೆ ।
ಅಂದಿಗೆ ಗೆಜ್ಜೆ ಮೊದಲಾದಾಭರಣದಿಂದ
ಸುಂದರವಾದ ರೂಪದಿಂದ ಬಂದು ।
ಮಂದಹಾಸದಿಂದ ಮಾತನಾಡಿದರಿಂದ ।
ಬೆಂದು ಪೋದವೆನ್ನ ತ್ರಿವಿಧ ತಾಪ ।
ಇಂದಿರೆ ಈ ರೂಪದಿಂದ ತೋರಿದಳು ।
ಬಂಧುನೆನಿಪ ಲೋಕ ಗುರು ಸತಿಯೋ ।
ಕಂದುಕಂಧರ ನಾದ ದೇವನ್ನ ರಾಣಿಯೊ ।
ಇಂದ್ರಾಣಿ ಮೊದಲಾದ ಜನರೊರ್ವಳೊ ।
ಮಂದಾಕಿನಿಯೊ ಇದರೊಳೊಂದರಿಯೆ ಕರುಣ ।
ಸಿಂಧುವೆ ನಿನ್ನ ಪದಕೆ ನಮೊ ನಮೊ ।
ಮಂದರ್ಗೆ ಯೋಗ್ಯವಾದ ಮನುಷ್ಯ ದೇಹವನ್ನು ।
ಪೊಂದಿಪ್ಪ ಕಾರಣದಿಂದ ನಿನ್ನ ।
ಅಂದವಾದ ರೂಪ ಕ್ರಿಯಗಳನ್ನು ತಿಳಿದು ।
ವಂದಿಸಿ ವರಗಳು ಬೇಡಲಿಲ್ಲ ।
ಇಂದಿರೆ ರಮಣನ ಬಂಧಕ ಶಕುತಿಯು ।
ಮಂದನಾದವ ನಾನು ಮೀರುವೆನೇ ।
ಕಂದನ ಅಪರಾಧ ವೆಣಿಸದಲೆ ನೀನು ।
ಅಂದವಚನವನ್ನು ಸತ್ಯಮಾಡಿ ।
ಬಂಧು ನೆನಿಸಿಕೊಂಬ ಗುರುವಿಜಯವಿಠ್ಠಲನ್ನ ।
ಎಂದೆಂದಗಲದಲಿಪ್ಪ ವರವನೀಡು ॥೧॥

ಮಟ್ಟತಾಳ

ಸಾನುರಾಗದಿ ಎನ್ನ ಸಾಮಿಪ್ಯವ ನೈದಿ ।
ಪಾಣದ್ವಯದಲಿ ಮೇಣು ಸ್ಪರಿಶ ಮಾಡಿ ।
ಏನು ಬೇಡುವೆ ಬೇಡು ನೀಡುವೆನೆಂತೆಂದು ।
ವಾಣಿ ಇಂದಲಿ ನುಡಿದು ಅನುಗ್ರಹಿಸಿದದಕ್ಕೆ ।
ಮಾನುಷಾನ್ನ ಜನಿತ ಅಜ್ಞಾನದಿಂದ ।
ಜ್ಞಾನನಿಧಿಯೆ ನಿನ್ನ ಪದದ್ವಂದ್ವಕ್ಕೆ ನಮಿಸಿ

ಮಾನಸಿನಾಪೇಕ್ಷೆ ವಿವರಿಸಿ ಬಿನ್ನೈಸಿ ।
ಪೂರ್ಣ ಮಾಡು ಎಂದು ವರಗಳ ಬೇಡದಲೆ ।
ಹೀನ ಮನೋಭಾವ ಮಾಡಿದೆ ಹೇ ಜನನಿ ।
ಧೇನುವಿಗೆ ವತ್ಸ ಮಾಡಿದ ಅಪಚಾರ ।
ತಾನೆಣಿಸಿ ಅದರ ಸಾಕದೆ ಬಿಡುವುದೆ ।
ಮಾನನಿದಿಯೆ ಎನ್ನ ಅನುಚಿತವೆಣಿಸದಲೆ ।
ಏನು ಬೇಡಿದ ವರವ ನೀಡುವೆನೆಂತೆಂದ ।
ವಾಣಿ ಸತ್ಯ ಮಾಡು ಅವ್ಯವಧಾನದಲಿ ।
ಜ್ಞಾನ ಪೂರ್ಣ ಗುರುಯವಿಠ್ಠಲರೇಯನ ।
ಪ್ರೇರಣೆಯಿಂದಲ್ಲಿ ಪ್ರಾರ್ಥಿಸುವೆನು ನಿನ್ನ ॥೨॥

ತ್ರಿವಿಡಿತಾಳ

ನಿನ್ನನುಗ್ರಹದಿಂದ ಧನ ಮೊದಲಾದ ವಸ್ತು ।
ತನ್ನಿಂದ ತಾನೆ ಬಂದು ಒದಗುತಿರೆ ।
ಇನ್ನಿದಕ್ಕೆ ನಾನು ನಿನ್ನ ಪ್ರಾರ್ಥಿಪೊದಿಲ್ಲ ।
ಬಿನ್ನಪವನು ಉಂಟು ಗ್ರಹಿಸಬೇಕು ।
ಅನಂತ ಜನುಮದ ಪುಣ್ಯ ಪ್ರಭಾವದಿಂದ ।
ಘನ್ನಮಹಿಮನಾದ ಪುರಷನೋರ್ವ ।
ಕ್ಷಣವಗಲದಲಿಪ್ಪ ಆಪ್ತನಾದವನೆನಿಸಿ ।
ಎನ್ನ ವಿರಹಿತವಾದ ಸ್ಥಾನವನ್ನು ।
ಕಂಣಿಲಿ ನೋಡಲಾರೆನೆಂದು ನುಡಿದವನ್ನ ।
ಎನ್ನ ದುರ್ಭಗದಿಂದ ಅಗಲಿ ನಾನಾ ।
ಬನ್ನ ಬಡುತಲಿಪ್ಪೆ ನಿಮಿಷ ಒಂದ್ಯುಗವಾಗಿ ।
ಮನ್ನಿಸಿ ಮನಕ ತಂದು ಪೂರ್ವದಂತೆ ।
ಮನ್ಮನದಲಿ ತೋರೋ ವ್ಯವಧಾನ ಮಾಡದಲೆ ।
ಇನ್ನಿದೆ ಬೇಡುವೆ ಜನ್ನನಿಯೇ ।
ನಿನ್ನಿಂದ ನುಡಿದಂಥ ವಾಕ್ಯ ಸಫಲಮಾಡಿ ।
ಮನ್ಮನೋರಥವನ್ನು ಪೂರ್ಣ ಮಾಡು ಆ- ।
ಪನ್ನರ ರಕ್ಷಿಸುವ ಬಿರಿದು ನಿನಗೆ ಉಂಟು ।
ಸನ್ನುತಿಸಿ ಬೇಡಿಕೊಂಬೆ ಗುಣ ನಿಧಿಯೇ ।
ಪನ್ನಂಗ ತಲ್ಪ ಗುರುವಿಜಯವಿಠ್ಠಲರೇಯು ।
ನಿನ್ನ ವಾಕ್ಯವ ವಹಿಪ ಸರ್ವಕಾಲ ॥೩॥

ಅಟ್ಟತಾಳ

ಕರಣಗಳಲ್ಲಿ ಹರಿವ್ಯಾಪಕನೆಂತೆಂಬ ।
ಪರಿಯನ್ನು ತಿಳಿದಿಪ್ಪ ನರನುಡಿದ ವಾಕ್ಯ ।
ಪರಮೇಷ್ಠಿ ಮೊದಲಾದ ಸುರರು ಸಹಿತನಾದ ।
ಸಿರಿಪತಿ ವಹಿಸುವನೆಂದು ಪೇಳುತಲಿರೆ ।
ಕರುಣ ಮಾನಿಗಳಾದ ಸುರರಿತ್ತ ವರಗಳ ।
ಹರಿಸತ್ಯ ಮಾಡುವನೆಂಬದಚ್ಚರವೇನೋ ।
ಶರಣನ್ನ ಮನೋರಥ ಪೂರ್ಣ ಮಾಡುವುದಕ್ಕೆ ।
ಕೊರತೆ ನಿನಗಾವದು ಕೋಮಲಾಂಗಿಯೆ ನಿನ್ನ ।
ಚರಣದ್ವಂದ್ವಕೆ ನಮಿಸಿ ಶರಗೊಡ್ಡಿ ಬೇಡುವೆ ।
ತ್ವರಿತದಿಂದಲಿ ಈ ವರವನ್ನೆ ಪಾಲಿಸು ।
ಸುರಪಕ್ಷಪಾಲ ಗುರುವಿಜಯವಿಠ್ಠಲ ನಿಮ್ಮ ।
ಕರವಶವಾಗಿಪ್ಪ ಆವಾವ ಕಾಲದಲಿ ।।೪।।

ಆದಿತಾಳ

ಆವಾವ ಜನ್ಮದಲ್ಲಿ ಅರ್ಚಿಸಿದೆನೋ ನಿನ್ನ ।
ಆವಾವ ಕಾಲದಲ್ಲಿ ಅನುಗ್ರಹಿಸಿದ ವರವು ।
ಈ ವಿದ್ಯಮಾನವಾದ ಜನುಮದಲೊಮ್ಮೆಗನ್ನ ।
ದೇವಿಯೆ ನಿನ್ನ ಪಾದ ಸಾರಿದವನಲ್ಲ ।
ಗೋವತ್ಸನ್ಯಾಯದಿಂದ ನಿನಗೆ ನೀನು ಬಂದು ।
ಆವದು ಬೇಡಿದ ವರಗಳ ನೀವೆನೆಂದು ।
ಸುವಾಣಿಯಿಂದ ಎನ್ನ ಆದರಿಸಿದಿ ನಿನ್ನ ।
ಔದಾರ್ಯ ತನಕಿನ್ನು ಆವದಾವದು ಸಮ ।
ಶ್ರೀ ವತ್ಸಲಾಂಛನ ಗುರುವಿಜಯವಿಠ್ಠಲನ್ನ ।
ಭಾವದಿಂದಲಿ ನೋಳ್ಪ ಭಾಗ್ಯವೇ ಪಾಲಿಸೇ ।।೫।।

ಜತೆ

ನಿನ್ನ ದರುಶನದಿಂದ ಅನಿಷ್ಟವನು ನಾಶ ।
ಘನ್ನ ಇಷ್ಟರೂಪ ಗುರುವಿಜಯವಿಠ್ಠಲ ಪ್ರಾಪ್ತ ।।೬।।

ಶನಿವಾರದ ಸುಳಾದಿ

ಶ್ರೀ ಪ್ರಾಣದೇವರ ಸ್ತೋತ್ರ ಸುಳಾದಿ

ಧ್ರುವತಾಳ

ಘನದಯಾನಿಧಿಯಾದ ಪವನರಾಯನೆ ನಮೊ ।
ಪುನರಪಿ ನಮೊ ನಿನ್ನ ಪಾದ ಸರಸಿರುಹಕೆ ।
ಮಣಿದು ಬೇಡಿಕೊಂಬೆ ನೀನೇವೆ ಗತಿಯಂದು ।
ನಿನಗಿಂತ ಹಿತರಾರು ಜೀವನಕೆ ।
ಸನಕಾದಿ ವಂದ್ಯನ್ನ ಆಜ್ಞಾದಿಂದಲಿ ಪರಮ ।
ಅಣುಗಳಲ್ಲಿ ವ್ಯಾಪ್ತನಾಗಿ ಬಿಡದೆ ।
ಅಣುರೂಪಗಳಿಂದು ನಿಂದು ಮಾಡಿದ ಕೃತ್ಯ ।
ಮನಸಿಜ ವೈರಿಯಿಂದ ತಿಳಿಯಲೊಶವೆ ।
ಹೀನಾ ಮನಸಿನಿಂದ ಬದ್ಧನಾದವ ನಾನು ।
ಗುಣರೂಪ ಕ್ರಿಯೆಗಳ ವಿಧಿತನೇನೋ ।
ತನುವಿನೊಳಗೆ ಮೂರು ಕೋಟ್ಯಧಿಕ ಎಪ್ಪತ್ತೆರಡು ।
ಎನಿಪ ಸಾಸಿರ ರೂಪದಿಂದ ಸತಿಯ ಸಹಿತ ।
ತೃಣ ಮೊದಲಾದ ಜೀವ ಪ್ರಕೃತಿ ಕಾಲ ಕರ್ಮ ।
ಅನುಸಾರವಾಗಿ ಕ್ರಿಯೆಗಳನೆ ಮಾಡಿ ।
ಅನಿಮಿತ್ತ ಬಾಂಧವನೆನಿಪ ಸಜ್ಜನರಿಗೆ ।
ಜ್ಞಾನ ಭಕ್ತ್ಯಾದಿಗಳು ನೀನೆ ಇತ್ತು ।
ಮನದಲ್ಲಿ ಹರಿರೂಪ ಸಂದರ್ಶನವಿತ್ತು ।
ಘನಿಭೂತವಾದ ಆನಂದದಿಂದ ।
ವಿನಯದಿಂದಲಿ ಪೊರೆವ ಉಪಕಾರ ।
ವನು ಸ್ಮರಿಸಲಾಪಿನೆ ಎಂದೆಂದಿಗೆ ಗುಣನಿಧಿಯೆ ।
ಇನ ಕೋಟಿ ತೇಜ ಗುರುವಿಜಯವಿಠ್ಠಲರೇಯ ।
ಇನಿತು ನಿನ್ನೊಳು ಲೀಲೆ ಮಾಡುವ ಆವಕಾಲ ॥೧॥

ಮಟ್ಟತಾಳ

ಮಿನುಗುವ ಕಂಠದಲಿ ಎರಡು ದಳದ ಕಮಲ ।
ಕರ್ಣಿಕ ಮಧ್ಯದಲಿ ಸತಿ ಸಹಿತದಲಿದ್ದು ।
ವನಜಾಸನವಿಡಿದು ತೃಣ ಜೀವರ ತನಕ ।
ತನುಗಳಿಗೆ ವಿಹಿತವಾದ ಶಬ್ದಗಳನ್ನು ।
ನೀನೆವೆ ಮಾಡಿ ಅವರವರಿಗೆ ಕೀರ್ತಿ ।
ಘನತೆಯನೇ ಇತ್ತು ಕಾಣಿಸಿಕೊಳ್ಳದಲೆ ।
ಮನುಜಾಧಮರಿಗೆ ಮಾಯವ ಮಸಗಿಸಿ ।
ಕೊನೆ ಗುಣದವರನ್ನ ನಿತ್ಯ ದುಃಖಿಗಳಿಂದ ।
ದಣಿಸುವಿ ಪ್ರಾಂತ್ಯದಲಿ ಕಡೆ ಮೊದಲಿಲ್ಲದಲೆ ।
ದನುಜ ಮರ್ದನ ಗುರುವಿಜಯವಿಠ್ಠಲರೇಯ ।
ನಿನಗಿತ್ತನು ಈ ಪರಿ ಸ್ವತಂತ್ರ ಮಹಿಮೆಯನು ॥೨॥

ರೂಪಕ ತಾಳ

ನಾಶಿಕ ಎಡದಲ್ಲಿ ಭಾರತಿ ತಾನಧೋ ।
ಶ್ವಾಸ ಬಿಡಿಸುವಳು ನಿನ್ನಾಜ್ಞದೀ
ನಾಶಿಕ ಬಲದಲ್ಲಿ ಈಶನಾಜ್ಞದಿ ಊರ್ಧ್ವ ।
ಶ್ವಾಸ ಬಿಡಿಸಿ ಪೊರೆವಿ ಜೀವರನ್ನು ।
ತಾಸಿಗೊಂಭೈನೂರು ಕ್ರಮದಿಂದ ಇಪ್ಪತ್ತೊಂದು ।
ಸಾಸಿರದಾರುಶತ ದಿನ ಒಂದರಲಿ ।
ಭೂಶಬ್ದದಿಂದಲ್ಲಿ ಹರಿಯನ್ನೆ ಪೂಜಿಸುತ್ತ ।
ಅಶೀತಿ ನಾಲ್ಕು ಲಕ್ಷ ಜೀವರಿಗೆ ।
ಲೇಸು ಮಿಶ್ರಗಳಿತ್ತು ಅದರಂತೆ ನಿರ್ದೇಶ ।
ವಾಸಗೈಸುವಿ ನೀನೆ ಪ್ರಾಂತ್ಯದಲ್ಲಿ ।
ಈ ಸುಜ್ಞಾನವೆ ತಿಳಿದುಪಾಸನೆ ಮಾಳ್ಪರಿಗೆ ।
ಶ್ವಾಸ ಮಂತ್ರದ ಪುಣ್ಯ ಶೇಷವೀವಿ ।
ಕಾಶಿನಿಂದಲಿ ಕೋಟಿ ದ್ರವ್ಯ ಪ್ರಾಪುತದಂತೆ ।
ವಾಸುದೇವನು ಇದಕೆ ತುಷ್ಟನಾಗೀ ।
ಈ ಶರೀರದಿ ಪೊಳೆದು ಕ್ಲೇಶವ ಪರಿಹರಿಪ ।
ಈ ಸಂಜ್ಞದಿಂದಲ್ಲಿ ದಿವಿಜರೆಲ್ಲ ।
ದಾಸರಾಗಿಹರಯ್ಯಾ ನಿನ್ನ ಪಾದವ ಬಿಡದೆ ।
ಕ್ಲೇಶಾನಂದಗಳೆಲ್ಲಾ ನಿನ್ನಾಧೀನ ।
ದೇಶ ಕಾಲ ಪೂರ್ಣ ಗುರುವಿಜಯವಿಠ್ಠಲರೇಯ ।
ಭಾಸುರ ಜ್ಞಾನ ನಿನ್ನಿಂದ ನೀವ ॥೩॥

ಝಂಪಿ ತಾಳ

ಪಂಚ ದ್ವಾರಗಳಿಂದ ಪಂಚ ವಪುಷಗಳಿಂದ ।
ಪಂಚರೂಪನ ಧ್ಯಾನ ಮಾಳ್ಪ ನಿನ್ನ ।
ಪಂಚ ಮುಖ ಮೊದಲಾದಮರರೆಲ್ಲರು ನಿ-।
ಶ್ಚಂಚಲದಿ ಭಜಿಸುತಿರೆ ಅವರವರ ।
ವಾಂಛಿತಗಳನಿತ್ತು ಪೊರೆವ ಮುಖ್ಯಪ್ರಾಣ ದ್ವಿ-।
ಪಂಚ ಕರಣಕೆ ಮುಖ್ಯ ಮಾನಿ ನೀನೆ ।
ಪಂಚ ರೂಪಗಳಿಂದ ಪಂಚಾಗ್ನಿಗತನಾಗಿ ।
ಪಂಚ ವ್ಯಾಪಾರಗಳ ಮಾಳ್ಪ ದೇವ ।
ಪಂಚ ಪರ್ವದಲಿಪ್ಪ ಪಂಚ ಪಂಚಮರರು ।
ಸಂಚರಿಸುವರಯ್ಯಾ ನಿನ್ನಿಂದಲಿ
ಪಂಚ ಭೇದಗಳರುಹಿ ಶುದ್ಧ ಶಾಸ್ತ್ರಗಳಿಂದ ಪ್ರ-।
ಪಂಚ ಸಲಹಿದ ವಿಮಲ ಉಪಕಾರಿಯೇ ನಿ- ।
ಷ್ಕಿಂಚನರ ಪ್ರಿಯ ಗುರುವಿಜಯವಿಠ್ಠಲರೇಯನ ।
ಮಿಂಚಿನಂದದಿ ಎನ್ನ ಮನದಿ ನಿಲ್ಲಿಸು ॥೪॥

ತ್ರಿವಿಡಿತಾಳ

ದಳ ಅಷ್ಟ ಉಳ್ಳ ರಕ್ತಾಂಬುಜದ ಮಧ್ಯ ।
ಪೊಳೆವ ಕರ್ಣಿಕೆಯಲ್ಲಿ ಶೋಭಿಸುವ ।
ಮೂಲೇಶನ ಪಾದ ಪಂಕಜದಲಿ ನಿಂದು ।
ಸಲೆ ಭಕುತಿ ಇಂದ ಭಜಿಸುವ ನಿನ್ನ ಚರಣ ।
ಮೂಲದಲ್ಲಿ ಜೀವ ಆಶ್ರಯಿಸಿ ಇಪ್ಪನಾಗಿ ।
ಸ್ಥಳವ ಸೇರಿಪ ಭಾರ ನಿನ್ನದಯ್ಯಾ ।
ಒಲ್ಲೆನೆಂದರೆ ಬಿಡದು ಭಕುತರ ಅಭಿಮಾನ ।
ಒಲಿದು ಪಾಲಿಸಬೇಕು ಘನ ಮಹಿಮಾ ।
ಖಳದರ್ಪ ಭಂಜನ ಗುರುವಿಜಯವಿಠ್ಠಲರೇಯ ।
ಒಲಿವ ನಿನ್ನಯ ಕೃಪೆಗೆ ವಿಮಲ ಚರಿತ ॥೫॥

ಅಟ್ಟತಾಳ

ಜಾಗ್ರತ ಸ್ವಪ್ನ ಸುಷುಪ್ತಿಯಲ್ಲಿ ನೀನೆ ।
ಜಾಗರೂಕನಾಗಿ ಜೀವರ ಪಾಲಿಸಿ ।
ಭಾಗತ್ರಯದಲ್ಲಿ ವಿಭಾಗ ಮಾಡುವಿ ।

ನಾಗಭೂಷಣಾದಿ ಸುರರಿಗೆ ಜೀವನ ।
ಸಾಗರ ಮೊದಲಾದ ಸಕಲರಲ್ಲಿ ವ್ಯಾಪ್ತ ।
ನಾಗರಾಜನ ಅಂಗುಟದಿ ಮೀಟಿದ ಶಕ್ತ ।
ಯುಗಾದಿ ಕೃತನಾಮ ಗುರುವಿಜಯವಿಠ್ಠಲರೇಯನ ।
ಯೋಗವ ಪಾಲಿಸಿ ಭವದೂರ ಮಾಡೋದು ॥೬॥

ಆದಿತಾಳ

ಅಸುರರ ಪುಣ್ಯವನ್ನು ಭಕುತರಿಗಿತ್ತವರ ।
ಅಸಮೀಚೀನ ಕರ್ಮ ದನುಜರಿಗುಣಿಸುವಿ ।
ಈಶನೆ ಗತಿ ಎಂದು ನೆರೆ ನಂಬಿದವರಿಗೆ ।
ಸುಸಮೀಚಿನವಾದ ಮೋದಗಳೀವಿ ನಿತ್ಯ ।
ವಸುಧಿಯ ಭಾರವನ್ನು ಧರಿಸಿ ತ್ರಿಕೋಟಿಯ ।
ಸುಶರೀರಗಳಿಂದ ಬಹಿರಾವರಣದಲ್ಲಿ ।
ವಾಸವಾಗಿ ಸಕಲ ಭೂತ ಹೃತ್ಕಮಲದಲ್ಲಿ ನಿಂದು ।
ಬಿಸಜ ಜಾಂಡವನ್ನು ಪೊರೆವ ಕರುಣಿ ನೀನು ।
ಅಸಮ ನೆನಿಪ ಗುರುವಿಜಯವಿಠ್ಠಲ ರೇಯಾ ।
ವಶವಾಗುವನು ನಿನ್ನ ಕರುಣದಿ ಆವಕಾಲ ॥೭॥

ಜತೆ

ಹರಿಯ ವಿಹಾರಕ್ಕೆ ಆವಾಸ ನೆನಿಸುವಿ ।
ಗುರುವಿಜಯವಿಠ್ಠಲನ್ನ ಸುಪ್ರೀತ ಘನದೂತ ॥೮॥

। ಮದ್ವೇಶಾರ್ಪಿತವು ।

ಪ್ರತಿನಿತ್ಯ ಪಾರಾಯಣ ಮಾಡುವ ಗೀತಾ ಸುಳಾದಿ

ಧ್ರುವತಾಳ

"ತಸ್ಮಾತ್ ತ್ವಮುತ್ತಿಷ್ಠ ಯಶೋಲಭಸ್ವ ।
ಜಿತ್ವಾ ಶತ್ರೂನ್ ಭುಂಕ್ಷ್ವ ರಾಜ್ಯಂ ಸಮೃದ್ಧಂ ।
ಮಯ್ಯೈ ವೈತೇ ನಿಹತಾಃ ಪೂರ್ವ ಮೇವ ।
ನಿಮಿತ್ತ ಮಾತ್ರಂ ಭವ ಸವ್ಯ ಸಾಚಿನ್ ।
ಎನ್ನಿಂದ ಆದ ಕೃತ್ಯ ಆವಜ್ಞ ಮಾಡದಲೆ ।
ಉತ್ತರವ ಪೇಳುವದು ।
ಭಾವಾಭಿಜನ್ಯವಾದ ಅಹಂಕಾರ ವಾದರೂ ।
ಶ್ರೀವರ ನಿನ್ನಿಂದೇ ಪುಟ್ಟತೆನಗೆ ।
ಪಾವನ ಮಹಿಮ ಗುರುವಿಜಯವಿಠ್ಠಲರೇಯ ।
ಆವಪರಾಧ ಉಂಟು ತಿಳಿಸು ಪೇಳೊ ॥೧॥

ಮಟ್ಟತಾಳ

"ದ್ರೋಣಂಚ ಭೀಷ್ಮಂಚ ಜಯದ್ರಥಂಚ ।
ಕರ್ಣಂ ತಥಾನ್ಯಾನಪಿ ಯೋಧ ವೀರಾನ್ ।
ಮಯಾ ಹತಾಂ ಸ್ತ್ವಂಜಹಿ ಮಾವ್ಯಥಿಷ್ಠಾಃ ।
ಯುದ್ಧ್ಯಸ್ವಜೇತಾಸಿ ರಣೇ ಸಪತ್ನಾನ್" ।
ಪ್ರಾಣನಾಥನೆ ಗುರುವಿಜಯವಿಠ್ಠಲರೇಯಾ ।
ಎನಗಾವದು ಕೃತ್ಯ ಇದರೊಳಗೆ ॥೨॥

ತ್ರಿವಿಡಿತಾಳ

ವೀರನಾದವ ಒಂದು ಕರಗಸ ಕೈಯಲ್ಲಿ ।
ಧರಿಸಿ ಶತ್ರುಗಳನ್ನು ಹನನ ಮಾಡೆ ।
ಪರಿಪ್ರಾಪ್ತವಾದ ಘನತಿಯು ಪುರುಷಗಲ್ಲದೆ ಜಡ ।
ಕರಗಸಕೆ ಕೀರ್ತಿ ಬರುವದೆಂತೊ ।
ತುರಗ ಬಿಗಿದ ರಥ ಗಮನಾಗಮನದಿಂದ ।
ಪರಿಖ್ಯಾತಿವೈದಿದ ಕೀರ್ತಿಯನ್ನು ।
ತುರಗಶ್ರೇಷ್ಟಕೆ ಹೊರತು ಜಡಕೆ ಬರುವದುಂಟೆ ಈ ।
ತೆರದಿ ಬರುವದಯ್ಯಾ ಎನಗೆ ಕೀರ್ತಿ ।
ಹರಿ ನೀ ಒಲಿದು ಎನ್ನ ನಾಮ ರೂಪವಧರಿಸಿ ।
ಧರಣಿ ಭಾರವ ನಿಳುಹಿ ಮೆರೆದ ದೇವಾ ।

"ಯೆಯೇನಂ ವೇತ್ತಿ ಹಂತಾರಂ ಯಶ್ಚೈನಂಮನ್ಯತೆಹತಂ
ಉಭೌತೌನವಿ ಜಾನೀತೌ ನಾಯಂ ಹಂತಿ ನಹನ್ಯ ತೇ"॥
ಕರುಣಾನಿಧಿಯೇ ಗುರುವಿಜಯವಿಠ್ಠಲರೇಯಾ ।
ಹರಣ ಮಾಡುವ ಕರ್ತು ನೀನೆ ದೇವಾ ॥೩॥

ಅಟ್ಟತಾಳ

"ನಜಾಯತೇ ಮ್ರೀಯತೇವಾ ಕದಾಚಿನ್ ।
ನಾಯಂ ಭೂತ್ವಾ ಭವಿತಾವಾ ನಭೂಯಃ ।
ಅಜೋನಿತ್ಯಃ ಶಾಶ್ವತೋಽಯಂ ಪುರಾಣೋ ।
ನಹನ್ಯತೆ ಹನ್ಯಮಾನೇ ಶರೀರೇ"।
ಕರುಣಾನಿಧೆ ಗುರುವಿಜಯವಿಠ್ಠಲರೇಯ ।
ಸೋಜಿಗವೇ ಸರಿ ಎನ್ನ ಅಪರಾಧವಾ ॥೪॥

ಆದಿತಾಳ

"ಲೇಲಿಹ್ಯಸೇ ಗ್ರಸಮಾನಃ ಸಮಂತಾತ್ ।
ಲೋಕಾನ್ ಸಮಗ್ರಾನ್ ವದನೈರ್ಜ್ವಲದ್ಭಿಃ ।
ತೇಜೋಭಿರಾ ಪೂರ್ಯ ಜಗತ್ ಸಮಗ್ರಂ ।
ಭಾಸಸ್ತವೋಗ್ರಾಃ ಪ್ರತಪಂತಿ ವಿಷ್ಣೋ'।
ಬಾಲಾರ್ಕ ಕೋಟಿಪ್ರಭ ಗುರುವಿಜಯವಿಠ್ಠಲರೇಯಾ ।
ಆಲೋಚಿಸಿದರೂ ಎನಗಿಲ್ಲಪರಾಧವಾ ॥೫॥

ಜತೆ

ಬ್ರಹ್ಮಸ್ತ್ವಾಬ್ರಹ್ಮಾನಾಮಾಸೌ ರುದ್ರಸ್ಥ ರುದ್ರನಾಮಾ
ಎಮ್ಮನಾಮವು ನೀನೇ ಗುರುವಿಜಯವಿಠ್ಠಲರೇಯಾ ॥೬॥

ಶ್ರೀ ಮದ್ವೇಶಾರ್ಪಿತವು

ಶ್ರೀ ಗುರು ವಿಜಯ ವಿಠ್ಠಲರ ಪದಗಳು

ಪದ - ೧ ರಾಗ ಕಾಂಬೋಧಿ ಝಂಪೆತಾಳ

ಕರುಣಿಸಿ ವೃಷ್ಟಿಗರಿಯೊ ಕಮಲನಯನ ।
ನರರಗಳ ಅಪರಾಧ ನೋಡದಲೆ ವೇಗದಲಿ ॥ಪ॥

ಅನ್ನದಿಂದಲಿ ಭೂತಗಣ ಉದ್ಭವಿಸುವದು ।
ಅನ್ನದಿಂದಲಿ ಅಭಿವೃದ್ಧಿಯಾಹದು ॥
ಅನ್ನದಿಂದಲಿ ತ್ರಿವಿಧಸಾಧನವು ಪೂರ್ತಿಪದು ಪ ।
ರ್ಜನ್ಯದಿಂದಲಿ ಅನ್ನಜನಿಸುವ ಕಾರಣದಿ ॥೧॥

"ಭೀಷಾಸ್ಮಾದ್ವಾತಃ ಪವತೆ" ಎಂಬೋಕ್ತಿಯಲಿ ।
ಈ ಸಮಸ್ತಮರರು ನಿನ್ನಭಯದಿ ॥
ಬ್ಯಾಸರದೆ ತಮತಮ್ಮ ವ್ಯಾಪಾರಗಳಮಾಡಿ ।
ಪೋಷಿಸುವರು ಜಗವು ಪ್ರೀತಿಇಂದ ॥೨॥

"ವರುಷ ನಿಘೃಣ್ಹಾಮಿ ಸೃಜಾಮಿಚ" ಎಂದು ।
ಹರಿಯೆ ನಿನ್ನಿಂದಲೆ ವ್ಯಾಹರಿಸಿತು ॥
ಸುರಪತಿ ವರುಣಾದಿ ಸುರರು ನಿಮಿತ್ಯರು ।
ಪರಮ ಗುಣಸಾಂದ್ರ ಹೇ ಕರುಣಾಬ್ಧಿಚಂದ್ರ ॥೩॥

ನರನೊಬ್ಬ ಪ್ರಭುತನ್ನ ಪರಿಚರರನು ।
ಪರಮ ಅಭಿಮಾನದಲಿ ಪರಿಪಾಲಿಪ ॥
ಸುರರ ಬ್ರಹ್ಮಾದಿಗಳ ದೊರೆಯೆ ನಿನಗೆ ಮಾತು ।
ಸರಿಹೋದರೀ ವಚನ ಸಲಿಸು ಕೃಪೆಯಿಂದ ॥೪॥

ಆವಾವಸಾಧನದೀ ಆವಸುಖವೈದುತಿರೆ ।
ದೇವನಿನ್ನಯ ಕೀರ್ತಿ ಬರುವದೆಂತೊ ॥
ದೇವ ದೇವೇಶ ಗುರು ವಿಜಯವಿಠ್ಠಲರೇಯ ।
ಸಾವಧಾನದಿ ತಿಳಿದು ಪಾಲಿಪುದು ಬಿನ್ನಪವ ॥೫॥

ಪದ - ೨ ರಾಗ ಕಾಂಬೋಧಿ ಝಂಪಿತಾಳ

ವ್ರತವಲ್ಲದೆ ಅನವ್ರತ ಮಾಡ ಬಹುದೇ ।
ಶತಮುಖಸ್ಥಿತನಾದ ದಿವಿಜ ಪತಿಯ ।।ಪ।।

ದಾನಶೀಲ ನೆನಿಸಿ ವಿಬುಧರಿಗೆಮೃಷ್ಟಾನ್ನ ।
ಪಾನಗಳಿಡುವಸಮ ಪಂಙ್ತಿಯಲ್ಲಿ ।
ದೀನನೊಬ್ಬನು ಬರಲು ದೋಷಿ ಆದವನೆಂದು ।
ಆನನಹು ತಿರುಹುತಲಿ ಅವನಿಯೊಳಗೆ ।।೧।।

ಅನ್ನಕಾರಣ ವಾದ ಪರ್ಜನ್ಯದಿಂದಲಿ ಸಕಲ ।
ಜನರನ್ನು ಪರಿತೋಷ ಬಡಿಸಿ ಕೃಪದಿ ।।
ಚನ್ನಿಗನೆ ಈ ಅಲ್ಪಪ್ರಾದೇಶ ಸ್ಥಿತರನ್ನು ।
ಬನ್ನಬಡಿಸುವದೇನು ಘನ್ನ ಮಹಿಮಾ ।।೨।।

ಭಕ್ತವತ್ಸಲ ನೆಂಬೊಬಿರದು ನಿನಗುಂಟೆಂದು ।
ಸಖತನದಿ ಬಿನ್ನೈಪೆ ಸಾರ್ವಭೌಮ ।
ಭಕುತ ಸುರಧೇನು ಗುರುವಿಜಯವಿಠ್ಠಲರೇಯ ।
ಉಕುತಿ ಲಾಲಿಸಿ ವೃಷ್ಟಿಗರಿವುದು ಕರುಣದಿಂದಲಿ ।।೩।।

ಪದ - ೩ ರಾಗ ಕಾಂಬೋಧಿ ಝಂಪೆತಾಳ

ಗುರುವೆ ನಿಮ್ಮಯ ಕರುಣವೃಕ್ಷ ನೆಳಲಾ ।
ಹೊರತಾದ ಕಾರಣದಿ ಹೀನನಾದೆ ।।ಪ।।

ತ್ರೈತೆಯಲಿ ತಾರಾಖ್ಯ ದ್ವಾಪರದಿ ಉದ್ಧವ ।
ಖ್ಯಾತಿ ದ್ರೋಣನು ಕಲಿಯುಗದಿ ನಾನಾ ।
ಭೋಕ್ತಿಕಗಳ ಧರಿಸಿ ಪ್ರಾರ್ಥಿಸಿದ ಸಜ್ಜನರ ।
ಆರ್ತಿಗಳ ಪರಿಹರಿಸಿ ಸರ್ವಾರ್ಥಗರೆವ ।।೧।।

ಸುರರ ಅಂಶಕೆ ಮುಖ್ಯಗುರು ವೆನಿಸಿ ಮೆರೆದು ।
ನೀ ಮರುತ ದೇವನದಯಕೆ ಪಾತ್ರನಾಗಿ ।
ಹರಿಯ ಆನಂದಾಖ್ಯ ಶರಧಿ ಮುಣುಗಿದ ಮಹಾ ।
ಪರಮ ಕರುಣ ನಿಧಿಯೆ ದೇವ ಮಣಿಯೆ ।।೨।।

ಆವಾವಕಾಲದಲಿ ನಿನ್ನ ದಯದಿಂದಲೆ ।
ದೈವರ್ಥಗಳನ್ನೈದಿ ಸೌಖ್ಯಬಡುವೆ ।
ಕಾವಕರುಣಿಯೆ ಎನ್ನ ಅವಗುಣಗಳೆಣಿಸದಲೆ ।
ಸಾವಧಾನದಿ ಎನ್ನ ಸಲಹಬೇಕು ।।೩।।

ನೀ ಪ್ರಸನ್ನನಾಗೆ ಸಕಲ ವೈಭವದಿಂದ ।
ಪ್ರಪೂಜ್ಯರೆನಿಸುವರು ಅಮರ ತತಿಯು ।
ನೀಪರಾಂ ಙ್ಮುಖನಾಗೆ ಜ್ಞಾನಬಲಸಂಪದವು ।
ಲೋಪವೈದುವರೈಯ್ಯ ನಿರ್ಜರರು ।।೪।।

ಬಾಲಕನ ಅಪರಾಧ ಅನಂತ ವಿರಲಿನ್ನು ।
ಪಾಲಿಸಲಿಬೇಕಯ್ಯ ನೈಜಗುರುವೆ ।
ಪಾಲಸಾಗರ ಶಾಯಿ ಗುರುವಿಜಯವಿಠ್ಠಲರೇಯನ ।
ಕಾಲಕಾಲಕ್ಕೆ ಅಗಲದಂತೆ ವರವೀಯೊ ।।೫।।

ಪದ - ೪ ರಾಗ ಕಾಂಬೋಧಿ ಝಂಪೆತಾಳ

ಫಾಲಲಿಪಿ ಪರಿಹರಿಸಿ ಕೊಂಬುವರುಂಟೆ ।
ಕಾಲನಾಮಕ ನಿನ್ನಕ್ಲುಪ್ತದಲಿ ಬರದಿದ್ದ ।।ಪ।।

ಸಾಲು ಸ್ಪಟಿಕದ ರತ್ನಮಯವಾದ ಮನೆ ಇರಲು ವಿ - ।
ಶಾಲ ಪರ್ನದ್ದಾದರಿರ ಬಾರದೆ ।।
ಆಳುಗಳು ಬಹಮಂದಿ ಇದ್ದವಗೆ ।
ನುಡಿದು ಮಾತಾಡಿಸುವ ನರನೊಬ್ಬನಿರಬಾರದೆ ।।೧।।

ಜ್ಞಾನದಲಿ ಗುಣರೂಪ ಬಹಿರಂತರದಲಿನೋಳ್ಪ ।।
ಆನಂದದಲಿ ಸತತ ಇಪ್ಪವಂಗೆ ।
ಧ್ಯಾನದಲಿ ಕ್ಷಣಮಪಿ ಕುರುಹು ಕಾಣಿಸಿಕೊಂಬ ।
ದೀನ ಮನವಾದರೂ ಇರಬಾರದೆ ।।೨।।

ಕೋಟಿದ್ರವ್ಯವು ಇದ್ದು ಮೀಟಕವಡಿ ಇಲ್ಲದೆ ।
ಕಾಟಿಕಾಣದೆ ಸೊರಗಿ ಮರುಗಿದಂತೆ ।
ಹಾಟಕಾಂಬರ ಧರ ಗುರುವಿಜಯವಿಠ್ಠಲರೇಯ ।
ದಾಟುವರು ಇಲ್ಲ ನಿನ್ನ ಪ್ರಬಲ ಶಾಸನವ ।।೩।।

ಮಧ್ವೇಶಾರ್ಪಿತವು

ಶ್ರೀ ಶೇಷದಾಸರ ಶಿಷ್ಯರ ಕೃತಿಗಳು

ಶ್ರೀ ಶೇಷದಾಸರನ್ನು ಕುರಿತು ಹರಿದಾಸರು ಮಾಡಿದ ಕೃತಿಗಳು

ಶ್ರೀ ಶ್ಯಾಮಸುಂದರರಕೃತಿ (ಬಲ್ಲಟಗಿ ಶ್ರೀ ಗುಂಡಾಚಾರ್ಯರು)

ಪೋಷಿಸು ಎನ್ನಯ । ದೋಷಗಳೆಣಿಸದೆ ದಾಸರಾಯಾ ।
ಶೇಷನಾಮಕನೆ ವಿ । ಶೇಷ ಜ್ಞಾನವ ನೀಯೊ ದಾಸರಾಯಾ ॥ಪ॥

ಸಂತತ ಕರಪಿಡಿ । ಸಂತರೊಡೆಯ ಗುರು ದಾಸರಾಯ ।
ಸಂತೋಷತೀರ್ಥರ ಅಂತಃಕರುಣಪಾತ್ರ ದಾಸರಾಯಾ ॥
ಚಿಂತಪ ಜನರಿಗೆ । ಚಿಂತಾಮಣಿಯು ನೀನೇದಾಸರಾಯಾ ॥
ಚಿಂತೆರಹಿತ ವರ । ಚಿಂತರವೇಲಿವಾಸ ದಾಸರಾಯಾ ॥೧॥

ಕುಂಭಿಣಿ ದೇವ ಕ । ದಂಬ ಸಂಸೇವಿತ ದಾಸರಾಯಾ ॥
ಬೆಂಬಿಡದಲೆ ಮನ । ದ್ಹಂಬಲ ಪೂರೈಸು ದಾಸರಾಯಾ ।
ನಂಬಿದ ದ್ವಿಜರಿಗೆ । ಶಂಭುಗಿರಿಯಲ್ಲಿ ದಾಸರಾಯಾ ।
ಬಾಂಬೊಳೆ ತೋರಿಸಿ । ಸಂಭ್ರಮಗೊಳಿಸಿದಿ ದಾಸರಾಯಾ ॥೨॥

ಹರಿಕೇತು ಹರಿಸುತ । ಹರಿಣಾಂಕ ಕುಲಜಾತದಾಸರಾಯಾ ।
ಹರಿಕೇತು ಹರಿಸುತಾ । ದ್ಯರನ ಸಂಹರಿಸಿದ ದಾಸರಾಯಾ ॥
ಹರಿದಾಡುತಿಹ ಮನ ಹರಿಯಲ್ಲಿ ನಿಲಿಸಯ್ಯ ದಾಸರಾಯಾ ।
ಹರಿವೈರಿ ಮತ ಕರಿ । ಹರಿಪರಿಹರಿಸಘ ದಾಸರಾಯಾ ॥೩॥

ಅರ್ಥಿಜನರ ಇ । ಷ್ಟಾರ್ಥವ ಜಗದೊಳು ದಾಸರಾಯಾ ।
ಪೂರ್ತಿಸುವ ನಿನ್ನ ವಾರ್ತಿಕೇಳಿ ಬಂದೆ ದಾಸರಾಯಾ ॥
ಪಾರ್ಥಿವ ವರುಷದಿ । ಪಾರ್ಥಸಾರಥಿ ಭವ್ಯದಾಸರಾಯಾ ।
ಮೂರ್ತಿಯ ಸ್ಥಾಪಿಸಿ । ಕೀರ್ತಿಯ ಪಡದಿ ದಿವ್ಯ ದಾಸರಾಯಾ ॥೪॥

ನೇಮ ನಿಷ್ಠೆಯ ಬಿಟ್ಟು । ಪಾಮರನಾದೆನಗೆ ದಾಸರಾಯಾ ।
ಶ್ರೀಮಧ್ವ ನಿಗಮಾರ್ಥ । ಪ್ರೇಮದಿ ತಿಳಿಸಯ್ಯ ದಾಸರಾಯಾ ॥
ಕಾಮಾದಿ ಷಡ್ವೈರಿ । ಸ್ತೋಮಾದ್ರಿ ಕುಲಿಶನೇ ದಾಸರಾಯಾ ।
ಕಾಮಿತ ಫಲದಾತ । ಶ್ಯಾಮಸುಂದರ ಸುತ ದಾಸರಾಯಾ ॥೫॥

ಕೋಲು ಪದ (ಶ್ರೀ ಶ್ಯಾಮಸುಂದರ ಕೃತ)

ಇಳೆಯೊಳು ಚಿಂತ್ರವೇಲಿ ವಾನರೇಂದ್ರನ । ಸಲೆಸೇವಿಸುತ ವಲಿಸಿದ ಕೋಲೆ ।
ಸಲೆಸೇವಿಸುತ್ತ ಒಲಿಸಿದ ಗುರುಪ್ರಥಮ । ಶಿಲೆ ಶೇಷದಾಸರಬಲಗೊಂಬೆ ಕೋಲೆ ।
ಪಾರ್ಥಿವವರುಷದಿ ಪಾರ್ಥಸಾರಥಿ ಭವ್ಯ ॥ ಮೂರ್ತಿಯ ಮುದದಿ
ಸ್ಥಾಪಿಸಿ ಕೋಲೆ ॥ ಮೂರ್ತಿಯ ಮುದದಿ ಸ್ಥಾಪಿಸಿದಂಥ ಪೂರ್ವ
ಪಾರ್ಥಾಹಿಪಾರ್ಯರ ಪ್ರಾರ್ಥಿಪೆಕೋಲೆ ॥

ಶ್ರೀ ಗಿರಿಯಾಚಾರ್ಯರ ಕೃತಿ

(ಅರ್ಚಕರು ಶ್ರೀ ಕೊಪ್ಪರ ನರಸಿಂಹದೇವರ ಸನ್ನಿಧಾನ)

ರಾಗ - ಶಂಕರಾಭರಣ ರೂಪಕತಾಳ

ದಾಸವರ್ಯಪೊಷಿಸೆನ್ನನು । ಪ್ರಾರ್ಥಿಸುವೆ ಶೇಷ ।
ದಾಸವರ್ಯ ಪೋಷಿಸೆನ್ನನು । ಪ ।
ಪೋಷಿಸೆನ್ನ ಮನದಿ ಬಹ ದೋಷಗಳನು ತರಿದು ಇಂದಿ ॥ ರೇಶನಂಘ್ರಿ
ಧ್ಯಾನವ ಪ್ರತಿವಾಸರದಲಿ ಒದಗುವಂತೆ । ಅ. ಪ. ।

ದೇಶದೇಶಗಳಲಿ ಭಜಿಪದಾಸಜನರ ಮನದ ಅಭಿ ।
ಲಾಷಿಗಳನು ಸಲಿಸುತಲಿ ಸುರೇಶನಂತ ಮೆರೆದ ಶೇಷ ।೧।

ಮಂದನಾದರು ನಿಮ್ಮಯಪದ । ದ್ವಂದ್ವಭಜಿಸೆ ಜಗದಿ ಪ್ರಾಜ್ಞ
ನೆಂದು ಕರೆಸುವನು ಯೇನುತ ನಾ ವಂದಿಸುವೆ ಸುಜ್ಞಾನವಿತ್ತು ।೨।

ಕರುಣಶರಧಿ ನಿಮ್ಮನಾಮ ಸ್ಮರಣೆಮಾತ್ರದಿ ಭೂತಪ್ರೇತಗ ।
ಳಿರದೆ ಪೋಪವು ಶರಣು ಜನರ ದುರಿತ ಘನಕೆ ಮರುತರೆನಿಪ । ೩ ।

ಈ ಮಹಿಯೊಳಗಾದಿಶಿಲೆಯ ಸ್ವಾಮಿಯಪದದಿಂದತ್ರಿಪಥ । ಗಾಮಿನಿ
ಯಳ ತೋರಿ ಸ್ವಜನ ಕಾಮಿತವ ಪೂರೈಸಿದಂತ । ೪ ।

ಸೇರಿದ ಪರಿವಾರಕೆ ಸುರ ಭೂರುಹವೆಂದೆನಿಸುವಂಥ । ಪಾರ
ಮಹಿಮ ಕಾರ್ಪರ ಸಿರಿನಾರಸಿಂಹನ ನೊಲಿಸಿದಂಥ । ೫।

ತಂದೆ ಶ್ರೀ ನರಸಿಂಹ ಕೃತ

ರಾಗ - ಕಾಂಬೋಧಿ ಆದಿತಾಳ

ನೇತ್ರಗಳು ಸಾಫಲ್ಯಮಾಳ್ಪರ ಸುಗಾತ್ರರನು ಕಂಡೆ । ಪಾತ್ರರಾದ
ದರೂರ ದಾಸರ ಕೀರ್ತಿಸಲು ಪಾಪಗಳು ನಿಲ್ಲವೊ । ಪ ।

ವೇದಶಾಸ್ತ್ರಗಳು ಪೇಳುತ ಮೋದದಿಂದಿಹರು । ವಾದಮಾಡುವರಲ್ಲ
ಶಮದಮಾದಿ ಗುಣದವರು। ಮೋದತೀರ್ಥರ ಮತಾನುಸಾರವ
ಬೋಧಿಸುತ ಪರಮಾನುಗ್ರಹ ಮಾಳ್ಪರು । ೧।

ವಾಸುದೇವನ ದಾಸರೊಳಗ್ರೇಸರರೂ ಇವರು । ಶ್ರೀಶನಶುಭ
ಗುಣ ಕರ್ಮಾಂಗಳು ಚಿಂತಿಸುತಲಿಹರು । ಭೂಸುರಾಂಶರಲ್ಲಿ
ದಾವ ಸುರೇಶರೂ । ಶೇಷದಾಸರಾಗಿಹ್ಯರು ।೨।

ತಂದೆ ಶ್ರೀ ನರಸಿಂಹನ ಪದ ದ್ವಂದ್ವ ಭಜಿಸುವರು । ಬಂದ
ಸಜ್ಜನವೃಂದಕಾನಂದ ಗೈಸುವರು । ಇಂದಿರೇಶನ ಒಂದೆ ಮನದಿ
ಆನಂದ ಬಾಷ್ಪಗಳಿಂದ ಧೇನಿಪರು ।೩।

ಶ್ರೀ ನರಹರಿ ವಿಠ್ಠಲ ಕೃತ

ರಾಗ - ಕೇದಾರಗೌಳ ತ್ರಿವಿಡಿತಾಳ

ಶ್ರೀಶಾ ಭಕತರೊಳಗಗ್ರೇಸರೆನಿಪ ಶೇಷಾ । ದಾಸರಾಯರ
ವಂದಿಪೆ ।। ಪ ।। ಯೇಸುಜನ್ಮದ ಪುಣ್ಯರಾಶಿ ಇಂದಲಿಶ್ರೀನಿ ।
ವಾಸನಸ್ಥಳದಿ ನಿವಾಸ ಮಾಡ್ದರಕಂಡೂ ।। ಅ.ಪ. ।।

ವಿಜಯರಾಯರ ತುತಿಸಿ ವಿಜಯಸಾರಥಿಯ ವೊಲಿಸಿ ।
ವಿಜಯನಾಮವ ಪೊಂದಿಹ್ಯ । ವಿಜಯಕರ್ಣ ರೆಂದೆನಿಸಿ
ವಿಜಯಭವಾಬ್ಧಿ ತರಿಸಿ । ವಿಜಿತನ್ನವಾನ ರೆನಿಸಿ
ಗುರುವಿಜಯ ಮುದ್ರಿಕಿ ಪಡೆದ ।।೧।।

ನೆರೆನಂಬಿದವರಿಗೆದುರಿತರಾಶಿಯ ಕಳದು । ಪರಿವಾರ ವರ
ಸುಖ ಸುರಿಸುವರಾ । ಪರಮ ಭಾವಗತರಿವರಾದ ಕಾರಣ ।
ಇರುವಲ್ಲಿ ಭಾಗೀರಥಿ ಕರದು ತೋರಿಸಿಪೊರೆದ ।।೨।।

ಸುರವಂದ್ಯಗಭಿಮುಖಿ ಸುರಪದಿಕ್ಕೆನೋಳ್ ಭೂ । ಸುರರಾ
ಪೂಜಿಸಿ ಭಕ್ತಿಸುರಸಾನ್ನದಾನ ನಿರುತವ ನಡಸಿ ಕರ

ಮುಗಿದು ನಿತ್ಯಾ । ಮರುತಾಂತರ್ಗತ ಶ್ರೀ ಹರಿಗೆ
ಅರ್ಪಣೆ ಮಾಡುತಾ ॥೩॥

ಕ್ಲಿಪ್ತಾ ಮುಕ್ತಿಗಳೆನಿಸಿ ಕ್ಲಿಪ್ತಾ ಯೋಗವ ಚರಿಸಿ ಕ್ಲಿಪ್ತಾ
ಭೋಗವತೋರಿಸಿ । ಕ್ಲಿಪ್ತ ಭೋಜನವೃತವ ಕ್ಲಿಪ್ತಾನ್ನದಾನ
ಬಿಡದೆ ಕ್ಲಿಪ್ತಾದಿನವನದು ಹರಿಯಾ । ಕ್ಲಿಪ್ತಮೀರದೆ ನಡದಾ ॥೪॥

ಭೂತಪ್ರೇತಗಳಿವರಾ ವಾರ್ತಿಕೇಳಿ ದಾಕ್ಷಣವೆ । ಸೋತು
ಮನದಿ ಬಲುಭೀತಿ ಮಾಡುವವೂ । ಯಾತ ಕೇಪರಿಯನೇ
ಮಾರುತ ನಿವರ ಮುಂದೆ । ಪ್ರೀತಿಯಿಂ ನಲಿ
ಯುತ ಮಾತು ಮನ್ನಿಸುತಿರುವ ॥೫॥

ಶೆ ಎನಲು ಶೇಷ ಷಡ್ಗುಣಧರ ಕಾವಾ । ರಾ ಎನಲು ರಘು
ವರನೂ । ಯಾ ಎನಲು ಯಜ್ಞನಂ । ಈವರಣದಿ ಪೊರೆವಾ ।
ನೇಮಾನಡೆಸಿ ಬಲು ಪ್ರೇಮದಿಂಪೊರೆವಂಥ ॥೬॥

ಶ್ರೇಷ್ಠಾದಿಶಿಲೆ ಎಂಬುತ್ಕೃಷ್ಟ ಕ್ಷೇತ್ರದಿ ದೇಹ । ವಿಟ್ಟಲ್ಲೆ
ನಿಲುತಿಹರೊ ಶಿಷ್ಟಾಸೇವಿಗಿವಲಿದು ಕುಷ್ಟಾಗಳ ಕಳಿದು
ಥಟ್ಟನವರ ಮನೋಭಿಷ್ಟ ವರಗಳೀವಾ ॥೭॥

ನಿತ್ಯಾ ಇವರ ತುತಿ ಭೃತ್ಯಾನೆನಿಸಿನುಡಿಯೆ । ಪ್ರೀತ್ಯಾಸ್ಪದ
ರಾಗುವರಾ । ನೃತ್ಯಗೀತದಿ ಭಜಿಸೆ ಅತ್ಯಧಿಕಾಲ್ಹಾದಾ । ವಿತ್ತು
ಹರಿಯಾ ನಿಜಾ ಭೃತ್ಯನ್ನ ಮಾಡುವಾ ॥೮॥

ಗುರುಗಳ ತುತಿಯನು ಮರಿಯಾದೆಮಾಡೆಂದು । ಪರಮಾನುಗ್ರಹ
ಪೇಳಿದಾ । ನರನೊಳ್ಕಲ್ಪ ನಾನಿವರಾಪರಿ ಎಲ್ಲಾ ಪರಿ ತಿಳಿವದಕೆ ।
ಗುರುಗಳಾಜ್ಞವ ಎನಗೆ ಅರುಹಿದಂದದಿ ನುಡಿದೆ ॥೯॥

ನಿನ್ನಾಜ್ಞದಂದದಿ ಇನ್ನಾದರೂ ನುಡಿಸೂ । ಬಿನ್ನೈಸುವೆನು
ಕರುಣೆಯೇ। ಎನ್ನಪರಾಧ ಎನಿಸಲಾಗದು ಗುರುವೆ ।
ಪನ್ನಂಗಶಯನನ್ನ ಪದವ ತೋರಿಸಿ ಕಾಯೊ ॥ ೧೦ ॥

ಸುರರೋಳುತ್ತಮರಾಗಿ ಧರಿಯೊಳ್ ಜನ್ಮವಪೊಂದಿ ।
ನರನೆಂದೆನಿಸಿಕೊಂಡರೂ । ನಿರುತದಿಂ ತವಪಾದ ಸ್ಮರಿಸು
ವರಾ ಕರುಣಾಬ್ಧಿ । ನರಹರಿ ವಿಠ್ಠಲನ್ನ ಚರಣತೋರಿಸಿ ಕಾವಾ ॥೧೧॥

ಶ್ರೀ ಕಮಲಾಪತಿ ವಿಠ್ಠಲ ಕೃತ

ರಾಗ ಪೂರ್ವಿ ಆದಿತಾಳ

ಗುರುವಿಜಯರಾಯರ ಪದಸರಸಿಜ ಸೇವಿಪ ನರನೇಜಗನ್ಮಾನ್ಯಾ
ಧನ್ಯಾ ॥ಪ॥ ನಿರುತ ಸ್ಮರಿಸುವರದುರಿತ ತರಿಯಲವ
ತರಿಸಿ ನರಹರಿಯ ಪರಿಚರಿಸುವ ನಿಜ ॥ಅ.ಪ॥

ಭೂಕಾಂತನ ಬಹುಬಾಧಿಗೆ ತಾಳದೆ ಈ ಕರುಣಿಕನ ತನವಾ ।
ಬೇಕಿಲ್ಲೆಂದರು ಲೌಕಿಕದ ಸ್ಥಿತಿಸಾಕುವ ಶ್ರೀದೇವಾ । ಶ್ರೀಕಳ
ತ್ರನ ಕೃಪಾಕಟಾಕ್ಷದಿಂದೇಕ ಮನೋಭಾವ । ಸ್ವೀಕರಿಸುತ
ಪರಲೋಕ ಸಾಧನವನೀಕರಿಸಿದರಾನೇಕ ದುರ್ವಿಷಯವ ॥೧॥

ಇಂತುಪರಿ ನಿಶ್ಚಿಂತರಾಗಿ ಗುರುವಂತರಾತ್ಮಹರಿಯಾ । ಸ್ವಾಂತದಿ
ಭಜಿಸುತ ಚಿಂತರೇವಲಿ ಹನುಮಂತನ ಪರಮದಯಾ ।
ಎಂತುಪೇಳಲಿ ಬಲುಶಾಂತರಾಗಿ ಶ್ರೀಕಾಂತನ ಪರಿಪರಿಯಾ ।
ಅಂತರಂಗದೊಳನುಭವಿಸುತ ಗುಣವಂತರಿವರಿಗೆ ದಿಗವಂತದಿ ಸರಿಯಾ ॥೨॥

ಲೇಸುಜ್ಞಾನವ ಬಯಸುವ ಜನರೋಲ್ । ಆ ಸೋಮಪುರದಲಿ ।
ವಾಸವಾದ ರಾಮದಾಸರಿಂದುಪದೇಶವ ಕೊಳ್ಳುತಲೇ । ಹೇಸಿ
ವಿಷಯದಿಂದೋಷಿಯಾದ ಶ್ರೀನಿವಾಸರಾಯರಲ್ಲಿ । ಯೇಸು
ಜನ್ಮದ ಸುಕೃತವು ಇವರನು ನಿರ್ದೋಷಿಗಳನು ಗೈ
ದಿಸಿದರು ತ್ವರಿತದಲಿ ॥೩॥

ವೇದವೇದ್ಯನ ಗುಣಂಗಳ ಪದಸುಳಾದಿ ಪ್ರಮೇಯವನೂ ।
ಸಾದರದಿಂದಲಿ ಭೂದೇವರಿಗೆ ಬೋಧಿಸಿ ತತ್ವವನೂ ।
ಸಾದಿಸಿ ಭೇದವ ಜೀವೇಸ್ವರ ಮತ ಭೇದಿಸಿವಾದಿಯನೂ
ಆದಿ ವ್ಯಾಧಿ ಅನಾದಿ ಭೂತಗಣ ಭೇದಿಸಿಮಾಡಿ
ಪರೋದರ ಗತವನೂ ॥೪॥

ಮಿತಿಇಲ್ಲವರ ಚರಿತೆಗಳಪೊಗಳುವ ಅತಿಶಯ
ಸಮ್ಮೋದಾ । ಗತಿದಾಯಕ ಪಾರ್ವತಿ ಪತಿ ಅಚಲ ವಸ
ತಿಯನೆ ಮಾಡಿದಾ । ಕೃತಿರಮಣನ ವಲಿಸುತ ನಶನ
ವ್ರತ ಪಥದಿಂದಾಗಾಧಾ । ನುತಿಸು ಕಮಲಾಪತಿ ನರಸಾರಥಿ
ಪ್ರತಿಮೆಯ ಪ್ರತಿಷ್ಠೆಯ ಹಿತದಿಂದಗೈದಾ ॥೫॥

ಶ್ರೀ ಜಗಜನುಮಾದಿಕಾರಣ ವಿಠ್ಠಲ ಕೃತ

ರಾಗ ಭೈರವಿ ಅಟ್ಟತಾಳ

ಭೂಸುರಾಗ್ರಣಿಯಾರ ಕರುಣಾ । ಸದಾ ಆಶಿಸುವರಿಗೆ ದೊರಿವದೋ
ಈ ಚರಣ ॥ ಪ ॥ ಈ ಸಮೀರಮತಾಬ್ಧಿ ಚಂದಿರ

ವ್ಯಾಸಭಟರಾನಂದತೀರ್ಥ ಪ- । ದಾಸರೋಜಸುಭೃಂಗ ಶೇಷಾ-
ದಾಸರಾಯರೆ ತಿಮಿರಭಾಸ್ಕರ ॥ಅ.ಪ॥

ದ್ವಿಜಕುಲೋತ್ತಮರಲ್ಲಿ ಜನಿಸಿ । ಚತುರ್ಭುಜ ಕೃಷ್ಣಯುಮನದಿ ತಾ
ಸ್ಮರಿಸಿ । ವಿಜಯದಾಸರಾಯರ ದಾಸನೆನಿಸಿ । ದಿವ್ಯ ಸುಜನ ಚಕೋ-
ರಕ್ಕೆ ಸೋಮನಂತುದಿಸಿ । ತ್ರಿಜಗದಲ್ಲಿ ಈ ಮಹಿಮೆ ವ್ಯಾಪಿಸಿ ಭಜಿಸಿ
ದವರಿಗೆ ನಂದ ಹೃದಯಾಂಬುಧಿಯಂ ತಿಹ್ಯನು ಹರುಷದಿ । ಕುಜನ-
ವನಕೆ ಕುಠಾರ ವೆನಿಪರಾ ॥೧॥

ಸುರರೋ ಮಹಾಮುನಿಯೋ ನಾನರಿಯೇ । ಇವರಿರವ ನೋಡಲು
ಘನ ಋಷಿ ಚರಿಯೆ । ನರರೆಂದು ತಿಳಿವದು ನಿರಯಭಾಗಿ ಸರಿ ಎಂಬೋ
ದನು ಸರ್ವ ಬಲ್ಲ ಶ್ರೀ ಹರಿಯೇ ॥ ಮರಳಿಮಾಯದ ಧರೆಯೊಳಗೆ
ಬಿದ್ದೊರಳಿ ಬಳಲಿದರೇನು ಫಲ ಸಿರಿ । ವರದದಾಸರ ಪೊಂದಿ
ಸುಖಿಸಲು । ದೊರೆವದೆಲೊ ಸಾಯುಜ್ಯವೆಂಬೆನೊ ॥೨॥

ಧಿಟದಿ ಮೊದಲಕಲ್ಲಲಿರುವಾ । ವೆಂಕಟನಾ ಕರಿಯಲು ಓ ಯನುತ
ತಾಬರುವಾ । ಥಟ್ಟನೆಕಾಮಿತ ಫಲಗರಿವಾ । ಇವರ ಹಟಗೆಲಿಸುತ
ಕೇವಲಸುಖ ಸುರಿವಾ। ಚಟುಲ ಜಗಜನುಮಾದಿಕಾರಣ ವಿಠಲ
ಇವರೋಶನಾಗಿ ಸರ್ವದ । ನಟನೆ ಗೈವುತ ನಂಬಿದವರಘ ತಟಿಸದೆ
ತಕ್ಷಣದಿ ಎಂಬೆನೋ ॥೩॥

ಶ್ರೀ ಪಾರ್ಥಸಾರಥಿ ವಿಠ್ಠಲ ಕೃತ

ರಾಗ ಯದುಕುಲ ಕಾಂಬೋಧಿ ಝಂಪಿತಾಳ

ಭಜನೆ ಮಾಡಿರೊ ಗುರುವಿಜಯರಾಯರ ಪಾದ । ನಿಜವಾಗಿನೆರೆ
ನಂಬಿರೊ ದಾಸರಪಾದ ॥ಪ॥ ಅಜನುಮೊದಲುಮಾಡಿ ದ್ವಿಜತೃಣ
ಪರ್ಯಂತ । ನಿಜಭೇದವನು ಸರ್ವಸುಜನ ಕೇಳ್ವರೆಂದು ॥ ಅ.ಪ॥

ಉದಯ ಮೊದಲುಮಾಡಿ ವದನದಿ ನುಡಿದಂಥ । ಪದವರ್ಣ
ವ್ಯಂಜನ ಮುದದಿಂದ ಜಪಿಸಿ । ಹೃದಯದೊಳಗೆ ನಾಲ್ಕು ದ್ವಿದಳ
ಕಮಲದ ಮಧ್ಯ । ಹೃದಯಾರ್ಕನಿಭ ಪ್ರಾಜ್ಞ। ಪದಕರ್ಪಿಸುವರೆಂದು ॥೧॥

ಭೂತಳದೊಳು ಭೂತಪ್ರೇತ ಬಿಡಿಸುವದು । ಖ್ಯಾತಿಯೆ ಇವರಿಗೆ
ನೀತವಲ್ಲವೊ ನಿರುತ ।।ವಾತಜಾತನಮಾತು ಮಾತುಗಳಿಂದ ಪು- ।
ನೀತ ಜನರಮಾಡಿ । ಖ್ಯಾತಿ ಐದಿಪರೆಂದು ।।೨।।

ಸಟೆಯನಾಡುವನಲ್ಲ ಧಿಟಪಾರ್ಥಸಾರಥಿ । ವಿಠಲನೇ ಇವರಲ್ಲಿ
ಸ್ಫುಟವಾಗಿ ಇರುವ ।। ಕುಟಿಲ ಮನುಜರಿವರ ನಟನೇನು ಬಲ್ಲರು
ತೃಟಿಯೊಳು ಜನರಮಹತು ಪಟಲ ಬಿಡಿಸುವರೆಂದು ।।೩।।

ಶ್ರೀ ಪಾರ್ಥಸಾರಥಿ ವಿಠಲ ಕೃತ

ಉದಯರಾಗ ಝಂಪಿತಾಳ

ಸ್ಮರಣೆಮಾಡಿರೊ ಗುರುಗಳ । ಸ್ಮರಣೆಯನುಮಾಡಿರೊ ಗುರು
ವಿಜಯರಾಯರ ಮಹಿಮೆ ವರಣಿಸಿದ ಜನರ ಕುಲಕೋಟಿ
ಗಳು । ನಿರಯಲೋಕವ ಮೀರಿ ವರ ವಿಮಾನವನೇರಿ
ಚರಿಸುವದು ಸುರಲೋಕದಿ ।ಪ।

ಮೇದಿನಿ ತಳದಲ್ಲಿ ಸಾಧುಗಳ ಪರಲೋಕಧಾದಿಯನು
ತಡಿಯದಲೆ ಭವದೊಳಗ ಕಲಿಇಂದ । ಬಾಧಿತರಾಗಿನ್ನು
ಮಾಧವನ ಮರೆದಿರಲು ।। ವೇದಾರ್ಥ ಮಾರ್ಗವನ್ನು ಬೋಧಿಸಲು
ಬೇಕೆಂದು । ಆದಿತೇಯರು ವಂದಂಶದಿಂದಿಳಿಯೊಳಗೆ ।
ಸಾದರದಿ ಜನಿಸಿದರು ನಿರುತ ।।೧।।

ಆದರದಿ ಅವನಿಯೊಳಗಾ ರುದ್ರದೇವನಿಂದಾರಾಧಿತನಾದ ।
ಅಮಿತಗುಣಪೂರ್ಣ ಆನಂದಮಯ ಮೂರ್ತಿಯ ।। ಪಾದ
ಪಂಕಜಗಳನ್ನು ಪೂಜಿಸಲಿಬೇಕೆಂದು । ಮೋದದಿಂದಲಿ
ತಮ್ಮ ಮಡದಿ ಮಕ್ಕಳು ಸಹಿತ । ಆದಿಶಿಲೆಯಲಿ ನಿಂತರೂ ನಿರುತ ।।.।।

ಪತ್ರಿಗಮನನದ್ವಾರಗಭಿಮುಖವಾಗಿ । ಮೇಲೆತ್ರವಾಗಿರುವಂಥ
ಛತ್ರವನು ನಿರ್ಮಿಸಿ । ಪುತ್ರಕಳತ್ರಯುತ ವಿಪ್ರರರನ
ಸದನದೊಳು । ಸ್ತೋತ್ರಪೂರ್ವಕ ಕೂಡಿಸಿ ।। ಚಿತ್ರತರ ಸ್ವಾದು
ರಸ ಪತ್ರಶಾಖಾನ್ನಗಳ । ಪಾತ್ರಿಯಲಿ ಮಂಡಿಸಿ ಭೋಕ್ತ್ರ
ಭೋಜ್ಯಗಳಲ್ಲಿ ವ್ಯಾಪ್ತನಾಗಿಹ ಹರಿಯ ಯೇಕತ್ರ ಚಿಂತಿಸುವ ನಿರುತ ।।೩।।

ಮೇದಿನಿಸುರರಿಗಳಿಗೆ ಅನ್ನೋದಕವಿತ್ತು । ಕಾದುಕೊಂಡಿದ್ದ
ವ್ಯಾಧಿಗ್ರಸ್ತರ ಕರೆದು । ಮೋದದಿಂದಲಿ ಹರಿಯ ತೀರ್ಥ
ಪಾದೋದಕವ । ಆದರದಿ ಕೊಟ್ಟುಬಳಿಕಾ । ಓದನದಪಾತ್ರಿ

ಯೊಳಗಿರುವ ದಿವ್ಯಾನ್ನದೊಳು । ಆದಿತೇಯರ ಸಹಿತ ಅಖಿಳಾಂ
ತ್ಮಕನಥೇನಿಸಿ ।। ಸಾಧುಜನಗಳಕರೆದು ತಮ್ಮಯ ಸುಪ್ರ
ಸಾದವನು ಕೊಡುತಿಹರು ನಿರುತಾ ।।೪।।

ಪ್ರಾಣಗಳಿಗನ್ನೋದಕವ ಕೊಟ್ಟು ಕ್ರಮದಿಂದ । ಪ್ರಾಣ
ಧಾರಣಮಾಡಿ ಯಂಬಗ್ನಿಗಳವಿವರ । ಪೂರ್ಣ
ಜ್ಞಾನದಿ ತಿಳಿದು । ವೇಣುವೈಶ್ವಾನರನ ಮುಖಕಲ್ಪಿಸಿ ಮತ್ತೆ ।
ಪಾಣಿಯಿಂದನ್ನಪಿಡಿದು ।। ಪ್ರಾಣಾಗ್ನಿ ಹೋತ್ರದಲಿ ಕಾರಣಾಗಿಹ
ಮುಖ್ಯ ಪ್ರಾಣಾಂತರ್ಯಾಮಿ ಹರಿಗಾಹುತಿಗ । ಳಿಂತೆಂದು
ಎಣಿಸುತ ಭುಂಜಿಸುವರ ನಿರುತಾ ।।೫।।

ವರಮಹಾ ಯಜ್ಞವನು ಮುಗಿಸಿ ಮೋದದಲಿಂದ । ಕರಗಳನು
ತೊಳೆದು ಸಿರಿ ನರಹರಿಯ ತೀರ್ಥವನು । ಕರದಿ ಕೈಕೊಂಡಿನ್ನು
ಹೊರಗಿದ್ದ ಮಂಟಪದಿ ಪರಿಠವಿಸಿ । ಕರದಿ ತಾಂಬೂಲವನು
ಪಿಡಿದು ಮೆಲವುತ ತಮ್ಮ ।। ಪರಿಚಾರಕರಿಗೆಲ್ಲ ಸಿರಿವರನ
ಮಹಿಮೆಯನು । ವರದೊರದು ಪೇಳುತಲಿ ಪರಮ
ಕರುಣವ ಮಾಳ್ಪರು ನಿರತಾ ।।೬।।

ಅಲ್ಲಿಂದಲ್ಲೆದ್ದು ಸಿರಿವಲ್ಲಭನ ಸ್ಥಾನಕ್ಕೆ । ಎಲ್ಲರಿಂದಲಿ ಕೂಡಿ
ಕೊಂಡಲ್ಲಿಗೆ ಬಂದು । ಫುಲ್ಲನಾಭನ ಅಂತರಂಗದಿಕಂಡು
ದಿವ್ಯವಾಗಿಹ ದ್ವಾರದಲ್ಲಿ ಕುಳಿತು । ಕಲ್ಲೂರು ವ್ಯಾಸಾಭಿದನ
ಮುಖದಲಿ ನಿತ್ಯ । ಸಲ್ಲಲಿತ ಶೃತಿಸಾರ ಭಾರತ ಶ್ರವಣ
ಅನುದಿನ । ದಲ್ಲಿ ಮಾಡಿದ ಪುಣ್ಯ ಹರಿಗರ್ಪಿಸಿ
ದೀನರ ಉದ್ಧರಿಪರೂ ನಿತ್ಯಾ ।।೭।।

ತರಣಿ ಅಸ್ತಾದ್ರಿಗೆ ತೆರಳಿದಾ ಪರಿಕಂಡು । ಸಿರಿ ಅರಸಗ
ಭಿನಮಿಸಿ ತ್ವರದಿಂದಲಿ ಹೊರಟು । ಶರ್ವವಂದಿತನಾದ
ಗಿರಿಶಾದ್ರಿ ಪಶ್ಚಿಮಕ । ಇರುವ ಮುಖ್ಯಪ್ರಾಣನಾ ।। ಚರಣ
ಗಳಿಗಾ ನಮಿಸಿ ಅಲ್ಲಿಂದ ಹೊರಹೊರಟು ಕ್ರಮದಿಂದ ।
ಪುರಹರ ಕ್ಷೇತ್ರಕ್ಕೆ ಐತಂದು । ಪರಮ ಮಂಗಳಮೂರ್ತಿ
ಪದಗಳಿಗೆ ನಮಸ್ಕರಿಸಿ ನರರ ನುದ್ಧರಿಸಿತಿಹರು ನಿರುತಾ ।।೮।।

ಕೃತ್ತಿವಾಸಾದ್ರಿಯನು ಸುತ್ತ ಪ್ರಾದಕ್ಷಿಣೆಯ । ಭಕ್ತಿ ಇಂದಲಿ
ಮಾಡಿ ನಿತ್ಯ । ತೃಪ್ತನಾದಹರಿಯ ದ್ವಾರವ ಪೊಕ್ಕು । ಮತ್ತೆ
ಅಭಿವಂದಿಸಿ ಮಧ್ಯರಂಗದ ಮಧ್ಯ । ಅರ್ಥಿಯಿಂದಲ್ಲಿ ಕುಳಿತು ।।
ನಿತ್ಯದಲಿ ತಮ್ಮಿಂದ ಪೇಳಿದ ಪದ ಸುಳಾದಿ । ಭೃತ್ಯರಾಗಿಹ

ತಮ್ಮ ತನಯರೇ ತಂಬೊರಿ । ಎತ್ತಿ ಕಟ್ಟಿದಸ್ವರದಿಪಾಡಲು
ಕೇಳುತಲಿ ಎ । ದ್ದಂತರಂಗದಲ್ಲಿ ಹರಿಯೆ ಪೂಜಿಸಿ
ಮಂಗಳಾರ್ತಿಗಳು ಮುಗಿಸುವವರ ನಿರುತಾ ॥೯॥

ಅನ್ನವನು ಇಳಿಯದಲೆ ಬನ್ನಬಡುತಿಹ ಜನರ । ಕಣ್ಣುಕಾಣದಲೆ
ಬಹು ಕಷ್ಟವಡುತಿಪ್ಪರಾ । ಘನ್ನ ಕಫ ವಾತಕ ಪೈತ್ಯ
ಶೋಭಿ ಇಂದಿರುವರಾ । ಖಿನ್ನರಾಗಿ ಕುಷ್ಟರೋಗದಲಿಂದ
ಬಳಲುವರ ಇನ್ನುಸಂತತಿ ಬೇಡುವರಾ ॥ ಅನ್ನಂತಜನ್ಮದಲಿ
ಮಾಡಿದ ಅಘವನ್ನು ಅನುಭವಿಸುತಲಿಪ್ಪ ಅಖಿಲ ಜನರಾ
ಕರೆದು । ಉನ್ನಂತಮಹಿಮರು ಪಾದೋದಕವ ನಿತ್ತು ಘನ್ನ
ದುಃಖವ ಕಳೆವರು ॥೧೦॥

ಈ ಪರಿಯ ವಿಭವದಿಂದಲಿ ಕುಳಿತಿರೆ ಜನರು । ಶ್ರೀಪತಿಯ
ಸೇವೆಗೆ ಹೊತ್ತಾಯಿತೆಂದು ವಿಜ್ಞಾಪನವ ಮಾಡಲು ಎದ್ದು ನಿಂ
ತಾಕ್ಷಣದಿ । ಚಾಪಪಾಣಿಯ ಸೇವೆ ಮಾಡೋಗೋಸುಗ ಕರದಿ
ಚಾಮರವ ಪಿಡಿದು ಬಳಿಕಾ ॥ ದೀಪಗಳ ಬೆಳಕಿನಿಂದ ಹೊರ
ಹೊರಟು ಮೆಲ್ಲನೆ ದಿವ್ಯವಾದಿ ತ್ರಸ್ವನ ವಿವಿಧವಾದ್ಯಗಳಿಂದ ।
ಆಪರಮಪುರುಷನ ನಿತ್ಯಸೇವೆಯ ಮುಗಿಸಿ ಆಗಛತ್ರಕೆ ಬರುವರು
ನಿರುತಾ ॥೧೧॥

ರಾಜಸೂಯ ಯಜ್ಞಮಂಟಪದ ಸೊಬಗಿನ ತೆರದಿ । ರಾಜಿಸುವ
ದೀಪ ವಂಙ್ತಂಗಳಿಂದ ಶೋಭಿಸುವ । ಭೋಜನದ ಶಾಲೆಯೊಳು
ಭೂಸುರರ ಮಧ್ಯದಲ್ಲಿ । ಭ್ರಾಜಿಸುತ ಕುಳಿತ ಬಳಕಾ ॥ ವ್ಯಾಜ
ವಿಲ್ಲದೆ ವಿಪ್ರವರರ ಕೂಡಿಕೊಂಡು । ಭೋಜನವ ಮಾಡುತಲಿ
ಭವನದಲಿ ಕೈತೊಳೆದು । ಮೂಜಗದ ವಲ್ಲಭಗ ಪೂಜೆಯೆಂ
ದರ್ಪಿಸಿ ಪರ್ಯಂಕದಲಿ ಪವಡಿಸುವರು ನಿತ್ಯಾ ॥೧೨॥

ಪತಿತರುದ್ಧಾರಾರ್ಥ ಪದಸೇವಿಯ ಕೊಡುತ । ಪೃಥಿವಿ ತತ್ವವ
ಪಿಡಿದು ಅವ್ಯಕ್ತ ತತ್ವಾಂತ । ತತುವ ಮಾನಿಗಳಲ್ಲಿ ಲಯವ
ಚಿಂತಿಸಿ ನಿತ್ಯ । ಯತನ ಪೂರ್ವಕದಿ ಮಲಗೀ । ಶತಪತ್ರಸಖನುದಯ
ಕಾಲದಲಿ ಎದ್ದಿನ್ನು । ತುತಿಸಿ ಅವ್ಯಕ್ತ ತತ್ವವ ಪಿಡಿದು ಕ್ರಮದಿಂದ ।
ಪೃಥಿವಿ ತತ್ವಾಭಿಮಾನಿಪರ್ಯಂತರದಿ ಸೃಷ್ಟಿಚಿಂತಿಸುತೇಳ್ವರಾ ನಿರುತಾ ॥೧೩॥

ಮಂದಮತಿ ನಾ ನಿವರ ಮಹಿಮೆಯನು ವರಣಿಪೆನೆ । ಇಂದಿರಾಪತಿ
ಇವರ ಅಂತರಂಗದಿ ನಿಂತು । ಒಂದೊಂದುವರಣವ
ನುಡಿಸಿದ ಕಾರಣದಿ ವದನದಿಂದಲಿ ನುಡಿದಿಹೆನು। ಮಂದಜನರು

ಇವರ ಮಹತ್ಮೆ ಬಲ್ಲರೇ । ಸಂದೇಹ ಇದಕ್ಕಿಲ್ಲ ಸಾಕ್ಷಿಯಾಗಿದೆ
ಜಗದಿ । ನಿಂದಿಸುವ ಜನರಂದಾಗ ತಕ್ಕದ್ದೇನು ವಂದಿಸುತ
ಕೊಂಡಾಡುವರು ನಿರುತಾ ॥೧೪॥

ಇವರ ಪದಸುಳಾದಿ ಪಾಡಿದವ ಪಥವ ಪಿಡಿವ । ಇವರು
ಪದಗಳ ಭಜಿಸದವನೇ ಮೇಲಾದವ । ಇವರನುಗ್ರಹ
ಪಡೆದವನೆ ಸುರಲೋಕದವ । ಇವರ ನಂಬಿದ ಮಾನವಾ ॥
ಅವನಿಯೊಳು ಜ್ಞಾನದಿಂದ ಅತ್ಯಧಿಕನೆನಿಸಿದವ । ಇವರಿಂ-
ದುಪದೇಶ ಕೊಂಡವನೆ ಸೌಖ್ಯದವ । ಇವರ ಕರುಣವ
ಪಡೆಯಿರೋ ನಿರುತಾ ॥೧೫॥

ಕಾಕುಜನರೆಲ್ಲ ಕುಚ್ಛಿತನವ ನಾಡಲು ಏನು । ಕಾಕಕೋಕಿಲ
ಸ್ವರವ ಕೇಳದೆ ಅಧಿ (ಧಿಕ್ಕರಿ) ಕರಿಸುವರೆ । ಘೂಕಭಾಸ್ಕರ
ನುದಯವಕಂಡು ರೋಷದಲಿ ಗುಹದೊಳಗೆ ಸೇರಿಕೊಂಡು ॥
ಲೋಕಬಾಂಧವನ ನಿಂದಿಸಿದ ರೇನಾಹದೇ । ಶ್ರೀಕಾಂತನಾಳು
ಗಳಗಖಿಲಕಾಲದಿ ಸೌಖ್ಯ । ಪೋಕಮಾತುಗಳಾಡಿ ಪುಣ್ಯವನು
ಕಳಕೊಂಡು ಪಾಪಭಾಗಿಗಳು ಕಾಣ್ಯೋ ಎಂದೂ ॥೧೬॥

ಉದಯಕಾಲದಲಿ ಈ ಪದವ ಪಾಡಿದ ಜನರ । ಹೃದಯದಲಿ
ಶ್ರೀಹರಿಯು ಹರುಷಿತನಾಗಿ ತನ ಪದವಿಯನು ಕೊಡುತ್ತಾ ।
ಬದಿಗನಾಗಿ ಇದ್ದು ಭವದಪಾಶವನು ಬಿಡಿಸಿ ಮುದದಿ ಸಂತೈ
ಸುವನು ॥ ಮದಡಮತಿ ಎನ್ನಿಂದ ಪೇಳ್ದಸ್ತುತಿ ಕೇಳಿ । ಮುದ
ಯುಕ್ತನಾಗಲಿ ಮಮ ಗುರುಗಳಂತಸ್ಥ । ಪದುಮನಾಭ
ನಮ್ಮ ಪಾರ್ಥಸಾರಥಿ ವಿಠಲ ಪ್ರೀತನಾಗಲಿ ಸರ್ವದಾ
ತ್ವರಿತಾ, ಸ್ಮರಣೆ ಮಾಡಿರೊ ಗುರುಗಳ ॥೧೭॥

ಶ್ರೀ ಗುಡೆಬೆಲ್ಲೂರು ರಾಘವೇಂದ್ರಾಚಾರ್ಯರ ಕೃತ

ರಾಗ - ಮಿಶ್ರಪಹಾಡಿ (ಮಾಂಡ) ಆದಿತಾಳ

ಶೇಷದಾಸರ ಪಾಡಿರೋ । ಸಜ್ಜನರೆಲ್ಲ ಶೇಷದಾಸರ ಪಾಡಿರೋ ।।ಪ।।

ಶೇಷದಾಸರಪಾಡಿ ದೋಷಗಳೀಡ್ಯಾಡಿ । ವಾಸುಕಿಶಯನನ
ದಾಸರಾದವರೆಲ್ಲ ।।ಅ.ಪ।।

ಆದಿಶಿಲಾದಲ್ಲಿ ಮಾಧವ ನಡಿಯಲಿ । ಸ್ವಧರ್ಮನಿಯನು
ತೋರಿ ಮೋದಗೊಳಿಸಿದ ಜನರ ।೧।

ದುರ್ಜಯ ಭವವನು ತರ್ಜಿಸಿ ದೋಷವಿ । ವರ್ಜಿತನನು
ತೋರ್ವ ಅರ್ಜುನಾಂಶಜರ ।೨।

ಲೇಸು ಸುಳಾದಿ ಪದಂಗಳ ರಚಿಸಿದ । ಶ್ರೀಶವೆಂಕಟಾ-
ಧೀಶನ ದಾಸರ ।೩।

ರಾಗ ಕಾಂಬೋದಿ ಝಂಪಿತಾಳ

ತೆರಳಿದರು ಗುರುವಿಜಯರಾಯರಂದೂ । ಗಿರಿಶ್ಯಾದ್ರಿಯಲಿ ಕಳೆವರ ತ್ಯಜಿಸಿ ಹರಿ ಪುರಕೆ ।।ಪ।। ಭಾನು ಉದಯದಿ ಹರಿ ಗುರುಗಳನ್ನು ಸ್ಮರಿಸುತಲಿ । ಧ್ಯಾನ ವಿಧಿಯಲಿ ರಾಮ ತೀರ್ಥದಲ್ಲಿ । ಸ್ನಾನ ದ್ವಾದಶ ನಾಮ ಮುದ್ರಿಗಳು ಧರಿಸುತಲಿ । ಪ್ರಣವ ಪೂರ್ವಕ ಮಹಾ ಮಂತ್ರ ಮಾಡುವರೂ ।।೧।। ಹರಿಯ ನಿರ್ಮಾಲ್ಯ ಪಿತೃತರ್ಪಣವ ಮಾಡುತಲಿ । ಸಿರಿ ರಮಣ ಮರುತರಿಗೆ ಅಭಿವಂದಿಸೀ । ಕರಿ ಚರ್ಮಧರನಲ್ಲಿ ಹರಿಣಾಸನದಲಿ ಕುಳಿತು । ಹರುಷದಲಿ ಶ್ವಾಸ ನಿರೋಧ ಗೈಸುವರೂ ।।೨।। ಎರಡೇಳು ದ್ವಾರಯುತ ಪುರ ನಾಡಿ ವನಮಧ್ಯಾ । ಸರಿಸಿಜಾತ್ಮಕ ಛತ್ರ ವಿಧಿಕಲ್ಪಾ ।। ತರುವಾಯದಲಿ ಮೆರೆವ ರಥದೊಳು ಫಣಿ ಫೀಠದಲಿ । ಶಿರಯುತ ಪ್ರಾಜ್ಞಗಂತರ ಪೂಜೆ ಮಾಡುವರು ।।೩।। ಆಗ ಮಧ್ಯಾನ್ಹದಲಿ ಪುನಹ ಸ್ನಾನವ ಮಾಡಿ ಭಾಗವತ ಭಕುತಿಯಲಿ ಶ್ರವಣ ಗೈದೂ । ಆಗಮೋಕ್ತದಲಿ ಷೋಡಶೋಪಚಾರದಿಂದ । ನಾಗ ಶಯನಗೆ ಬಾಹಿರ ಪೂಜೆ ಮಾಡುವರೂ ।।೪।। ವಾಸುದೇವಗೆ ನೈವೇದ್ಯ ಸಮರ್ಪಿಸುತ ಬ್ಯಾಸರದೆ ವೈಶ್ವದೇವ ಬಿಡದೇ । ಭೂಸುರರು ಸಹಿತ ಪ್ರಾಣಾಗ್ನಿ ಹೋತ್ರ ಕ್ರಮದಿ । ಶ್ರೀಶನ ಸರ್ವತ್ರ ಚಿಂತಿಸುವ ಭುಂಜಿಪರು ।।೫।। ಸಾಯಂಕಾಲದಲಿ ಭಾರತ ಪುರಾಣವ ಕೇಳಿ । ಕಾಯಜ ಪಿತ ಶ್ರೀನಿವಾಸನಲ್ಲೀ ಆಯಾಸವಿಲ್ಲದೇ ಹರಿದಾಸರಾ ಕೂಡ । ಗಾಯನದಿಂದ ಮಂಗಳಾರ್ತಿ ಮಾಡುವರೂ ।।೬।। ಆಧಿ ವ್ಯಾಧಿಗಳು ಉನ್ಮಾದಿ ವಿಭ್ರಮ ನಾನಾ । ಬಾಧಿಯಲಿ ಜನರು ಬರಲವರ ನೋಡಿ । ಪಾದೋದಕದಿ ಅವರ

ರೋಗ ನಿರ್ಮೂಲ ಗೈಸಿ । ಆದರದಿ ಸರಸವಾಕ್ಯವ ಕೇಳಿ ಮನ್ನಿಪರೂ ॥೭॥ ಅನಿಲ ದೇವನನುಗ್ರಹಕ ಪಾತ್ರ ನೆನಿಸಿ । ಮುನಿಗಳಂದದಿ ಗಿರಿ ಗುಹವು ಸೇರಿ । ಮೌನನಶನಾ ವ್ರತದಿ ನಿಪುಣನೆಂದೆನಿಸಿ ಈ ಕ್ಷೋಣಿಯೊಳ್ಪದ ಸುಳಾದಿಯ ರಚಿಸಿ ಮೆರದವರೂ ॥೮॥ ಶೇ ಯನಲು ಭಕುತಿಯಲಿ ಧರ್ಮ ಬುದ್ಧಿಯ ನೀವ । ಷಾ ಯ ನಲು ಇಹದಿ ಧನವಂತ ನೆನಿಪಾ । ದಾ ಎನಲು ಸ್ವರ್ಗದಲಿ ಕಾಮ ಪೂರ್ಣವ ಮಾಳ್ಪ । ಸಾ ಎನಲು ಮೋಕ್ಷ ಸುಖ ವ್ಯಕ್ತಿಮಾಡುವರೂ ॥೯॥ ಪ್ರಾರ್ಥಿವ ನಾಮ ಸಂವತ್ಸರಾದೀದಿನದಿ । ಪಾರ್ಥಸಾರಥಿಯ ಪ್ರತಿಷ್ಠೆ ಮಾಡಿ । ಪಾರ್ಥಿಸುತ ಉಪನಯನ ವಿವಹಗಳ ಮಾಡಿ । ಮಹಾ । ಕೀರ್ತಿಯನು ಪಡೆದು ಶೀಲ ಮಾರ್ಗವ ಪಿಡಿದು ॥೧೦॥ ಶಕೆ ಉರಗಾಯನ ವೈಶಾಖ ಶುಕ್ಲ ಸೌಮ್ಯ । ಅಷ್ಟಮಿ ಪುರುಷ ರಿಕ್ಷಾ ಶುಭ ಯೋಗದಿ ॥ ಶ್ರೀಷ್ಟೇಶ ಶ್ರೀಶಗೋಪಾಲ ವಿಠ್ಠಲನ ಪದ । ಅಷ್ಟದಳ ಕಮಲದಲಿ ತುತಿಸುವ ಸುಮುಹೂರ್ತದಲಿ ॥೧೧॥

ಹರಪನಹಳ್ಳಿ ಭೀಮವ್ವ ವಿರಚಿತ

ಶ್ರೀ ಶೇಷದಾಸರ ಕೃತಿ

ಸ್ಮರಿಸಿ ಬದುಕಿರೋ ಸರ್ವಾನಂದ ಗುರುಗಳ
ನಿರುತದಿಂದ ಇಷ್ಟ ಫಲವ ನೀಡೋ ವರಗಳ ಬೇಡಿ ॥ಪ॥

ಆದಿಕಲ್ಲಿನಲ್ಲಿ ಮಹಾದೇವ ಕರೆಯೆ ಬಂದು ನಿಂತು
ಶ್ರೀದೇವಿರಮಣನ ಮುದ್ದು ಪಾದಾಂಬುಜವ ಪೂಜಿಸುವರ ॥೧॥

ಉತ್ತಮವಾಗಿದ್ದ ದಿವ್ಯ ಛತ್ರ ವಿಜಯ ತೀರ್ಥ ನಿರ್ಮಿಸಿ
ನಿತ್ಯದಲ್ಲಿ ಮೃಷ್ಟಾನ್ನವಾದ ವಿಸ್ತಾರವನೆ ಪೇಳಲೊಶವೆ ॥೨॥

ಕುಷ್ಟರೋಗ ವ್ಯಾಧಿ ಜ್ವರ ಚತುರ್ಥಿ ಭಯ ಭೀತಿಗಳನ್ನೆಲ್ಲ
ಬಿಟ್ಟೋಡಿಸಿ ತೀರ್ಥ ಅಂಗಾರದಲ್ಲಿ ಸಮಸ್ತರ ಮಹಿಮೆಯ ನೋಡಿ ॥೩॥

ಸಂತಾನ ಸಂಯುತದ ಫಲವ ನಿಂತು ಕೊಡುವ ಮಂತ್ರಾಕ್ಷತೆಯ
ಗ್ರಂಥ ಪದಸುಳಾದಿಯ ಲಕ್ಷ್ಮೀಕಾಂತಗೆ ಮಾಡರ್ಪಿಸುವರ ॥೪॥

ಹರಿಯ ದಿವ್ಯಾಸಿಕೆಯ ನಾಮ ಗುರು ವಿಜಯರಾಯರ
ಪ್ರೇಮ ಪಡೆದು ಭೀಮೇಶ ಕೃಷ್ಣನಂಘ್ರಿ ಬಿಡದೆ ಭಜನೆ ಮಾಡುವವರ ॥೫॥

॥ ಶ್ರೀ ಕೃಷ್ಣಾರ್ಪಣಮಸ್ತು ॥

ಲಕುಮೀಶರ ಕೃತಿ

ಭೈಷ್ಮೀ ಸತ್ಯಾ ಸಮೇತ ಶ್ರೀ ಪಾರ್ಥಸಾರಥಿ ಪರಬ್ರಹ್ಮಣೇ ನಮಃ

ಶ್ರೀ ಶೇಷದಾಸರ ಅಷ್ಟಕ

ಸೀತಾಪತಿಂ ಹರಿಮ ಜಾತಂ ಪ್ರಣಮ್ಯಮತಿ ಹೇತುಂ ಸುಖಾಯ ಪವನಾ ।
ಜ್ಞಾತಂ ಬಲಾಯ ಪುರುಹೂತಾವತಾರ ಜಯತೀರ್ಥಂ ಧನಾರ್ಥ ಮನಿಶಂ ॥
ಪೋತಂ ಸುಧೀಂದ್ರ ಗುರು ಜಾತಂ ತಥೈವ ಮಮ ತಾತಂಚ ಜೀವಿತ ಕೃತೇ।
ಖ್ಯಾತಸ್ಸರೀತಿ ಮನು ನೀತಾಂ ಕರೋಮಿ ಕೃತಿ ಮೇತಾಂತು ಶೇಷ ಸುಗುರೋಃ ॥೧॥

ಶ್ರೀ ಪಾರ್ಥಸೂತ ಪದ ಜಾಪಾಖ್ಯ ಮುಕ್ತಿಪದ ಸೋಪಾನ ಮಾರ್ಗದ ಗುರುಃ ।
ಪಾಪಾತ್ಮನಾಂ ನಿಖಿಲ ತಾಪಾಪನೋದನತ ಯಾಪಾರ ಸೌಖ್ಯ ಮಧುಹತ ॥
ಭೂಪಾಲವರ್ಯ ಕೃತ ಕೋಪಾತ್ಕ್ವದಾಚಿದಯ ಮಾಪಾಶುಚೆಪ್ಪ ಶಿಖರಂ ।
ಗೋಪಾಲ ಭಕ್ತ ವಿಜಯೋಪಾಭಿದಸ್ಯ ಮಹಿಮಾಪೂರ ಮಜ್ಜನ ಮಧಾತ್ ॥೨॥

ದಾಸಾರ್ಯ ವರ್ಯ ಕರುಣಾಸಾಗರೋಪಗತ ಮೇಶಾಂಘ್ರಿ ಪದ್ಮ ಮಹಿಮಾ ।
ಲೇಶಾಮೃತಾಪ್ತಮತಿ ಕೋಶಃಶಚೀಶ ಇವ ಭಾಸಾಭಿನಂದ್ಯ ವಿಭುಧಾನ್ ॥
ದೇಶಾನ ಟನ್ ಖಿಲ ಕುಲೇಶಾನ್ ವಿಜಿತ್ಯ ರಭಸಾಸಾದ್ಯ ಭಕ್ತಿ ಭರಿತೊ ।
ವ್ಯಾಸಾರ್ಯ ಪನ್ನವ ಪಲಾಶೇನ ನಾಮ ಪತಗೇಶೋ ಯಥಾ ಮುರಹರಂ ॥೩॥

ಕ್ರೂರಾರಿ ದುಷ್ಟಮತ ವಾರಾಸಿ ಕುಂಭಸುತ ಮಾರಾಧ್ಯ ತದ್ವರಯುತಃ ।
ಸಾರಂ ಸುಚಿಂತ್ರವಲಿ ಮಾರಾದುಪೇತ್ಯ ಕಪಿ ವೀರಂಭಜನ್ ಕತಿಪಯಾನ್ ॥
ವಾರಾನುವಾಸ ಗುರುರಾರಾಧಯನ್ ಸುಜನ ವಾರಂ ಸುಭೋಜ್ಯ ಧನತೋ ।
ದೂರತ್ಪಿಶಾಚ್ಯ ಪರಿವಾರಃ ಪ್ರಯಾತಿ ಖಿಲು ಘೋರೋಪಿ ಯತ್ನರಣತಃ ॥೪॥

ಜಂಭಾರಿ ದಂತಿವರ ದಂಭಾಪಹಾರಿ ಕುಚ ಕುಂಭಾಂಚಿತೇಂದ್ವ ವರಜಾ ।
ಸಂಭೋಗ ಕಾಲಪರಿ ರಂಭಾಪ್ತ ಕುಂಕುಮ ವರಾಂಭೋರುಹಾಂಕ ರುಚಿರಂ ॥
ಅಂಭೋಜನಾಭ ಮತಿ ಸಂಭಾವನಾಯ ಜಗದಂಬಾ ಕುಮಾರ ವಚನಾತ್ ।
ಕುಂಭೀಂದ್ರ ಕೃತ್ತಿಧರ ಶಂಭೋರ್ಗಿರಿಂ ಜನಕ ದಂಬಾವೃತೋ ಗುರುರಗಾತ್ ॥೫॥

ರಾಮಂ ರಘೋಃಕುಲಲಲಾಮಂ ನಿಶಾಟತತಿ ಭೀಮಂ ಬಲಾಹಕ ಇವ ।
ಶ್ಯಾಮಂ ಸತಾಂ ಸಕಲ ಕಾಮ ಪ್ರದಂತ ಮಿಹ ಸೋಮಂ ಸುರೋಡು ನಿಕರೇ ॥
ಸೌಮ್ಯಂಬುಜಾಕ್ಷಮಿತಿ ವಾಮಂ ಯಥಾ ಸುಜನ ಧಾಮಾಸ್ತುವನ್ ಭಗವತಃ ।
ಪ್ರೇಮಂ ಪ್ರಸಾದ್ಯ ಬಲ ಸೀಮಂ ಸಮೀರಣ ಮಧೋಮಾಕಳತ್ರ ಮಭಜತ ॥೬॥

ಗಂಗಾಂಕದಾಚಿದಘ ಸಂಘಾಪಹಾರಕ ವಿಹಂಗಾಧಿಪ ಧ್ವಜವರೋ ।
ತ್ಸಂಗಾವಧಿಪ್ಲುತ ತರಂಗಾನ್ ದದರ್ಶ ಭವ ಭಂಗಾಂ ಜನೈಃ ಪರಿವೃತಃ ॥
ತುಂಗೋಪವಾಸ ವೃತ ರಂಗಾಧಿಪಸುಜನ ಸಂಗೀಹರೇರ್ಗುಣ ಗಣಾನ್ ।
ಸಂಗೀತತೋಕಥಯ ದಂಗೀ ಚಕಾರ ಮೃದುಲಾಂಗಿ ರಮಾಸುತ ಇತಿ ॥೭॥

ಶ್ರೀ ರಾಘವೇಂದ್ರ ಗುರು ಮಾರಾದ್ಯ ಮಾಯಿದಿತಿ ಜಾರಿಂತದೀಯ ಕರುಣಾ ।
ಧಾರೋನುಭೂಯ ಸುಖಸಾರಂ ಕಿರೀಟಿ ರಥ ಭಾರಂ ವಹಂತ ಮದಧತ ॥
ಶ್ರೀ ರಾಮವತ್ ಖಲ ಕುಠಾರೋಪ ನೀತಿ ಕೃತಿ ಮಾರಾದ್ವಿಧಾಯ ಸುಯಶೋ ।
ದೂರಂಗತಂ ಭುವಿ ದಧಾರಾಥನಾಕಿ ಪರಿವಾರಸ್ತುತೋ ಯಮಭವತ್ ॥೮॥

ಶ್ರೀ ಶ್ರೀಷವರ್ಯ ಹರಿದಾಸಾಗ್ರಣೀಶ್ಚರಿತ ಮಾಶಂಸಿತಂ ಯಲಮಳೌ ।
ವಾಸಸ್ಯ ವಿಠ್ಠಲ ಕೃತೀಶಸ್ಯ ಪೂರ್ಣ ಕರುಣಾಶಾವತಾಹ್ಯಹರಃ ॥
ಶ್ರೀ ಶ್ರೀನಿವಾಸ ಸುಕವಿಶೇನ ಪಾಠಮನು ಮೇಶೋದದಾತಿ ಸುಸುತಂ ।
ವಾಸೋಧನಂಚ ಸುಯಶಃ ಶೋಭನಂ ಸುಖಮ ಶೇಷಃ ಶ್ರುತಿ ಸ್ಮೃತಿ ಗತಿಂ ॥೯॥

ಇತಿ ಶ್ರೀ ಶ್ರೀ ರಘುದಾಂತ ತೀರ್ಥ ವಿರಚಿತ
ಶ್ರೀ ಶೇಷದಾಸರ ಅಷ್ಟಕ ಸಂಪೂರ್ಣಂ
॥ ಶ್ರೀ ಕೃಷ್ಣಾರ್ಪಣಮಸ್ತು॥

ಶ್ರೀವಿಜಯರಾಯೋ ವಿಜಯತೆ
ಮೊದಲುಕಲ್ಲು ಶ್ರೀಶೇಷದಾಸರು (ಅಪರೋಕ್ಷಿಗಳಾದಶ್ರೀಗುರುವಿಜಯವಿಠ್ಠಲದಾಸರಾಯ) ಕೃತ ಆಹ್ನೀಕ ಪದ್ಧತಿ (ಕೆಲ ಜತೆಗಳು ಕೆಲ ಉಗಾಭೋಗಗಳು ಸಂಗ್ರಹೀತ)

೧.	ಅನಂತ ಜನುಮಕ್ಕು ಅನಂತ ಮಾತಿಗೂ ಅನಂತ ನೀನೇ ಗತಿ ಗೋಪಾಲವಿಠ್ಠಲ॥
೨.	ಬಹಿರಂತರ ರೋಗ ನಿವಾರಣ ವಾಗೋದು ಅಹಿಶಾಯಿ ವಿಜಯ ವಿಠ್ಠಲನ ನಾಮವೇ ಸವಿಯೋ ॥
೩.	ಪವನ ನಿನ್ನಯ ಪಾದ ಪೊಂದಿದ ಮನುಜನು ಜನನ ಪುರಕ್ಕೆ ಸಲ್ಲಾ ವೇಣುಗೋಪಾಲವಿಠ್ಠಲ ॥
೪.	ಒಲಿದು ವಾಸುದೇವ ವಿಠಲನು ಆ ಬಲಿಗೆ ಸುಳಿದು ಸುಖಿಸಲೆಂದು ತಿಳಿಸೋ ಹೇಪ್ರಿಯಾ ॥
೫.	ನಿಜಭಾವ ಹನುಮಂತ ನಿಜಭಾವ ಗುಣವಂತ ನಿಜಭಾವ ಪುರಂದರವಿಠ್ಠಲನ್ನ ನಿಜದೂತ ॥
೬.	ಬ್ರಹ್ಮಸ್ತಂಬ ಪರಿಯಂತ ಕೊಂಡಾಡಿ ಮರಿಯದೇ ಬ್ರಹ್ಮ ವಂದಿತ ವಿಜಯವಿಠ್ಠಲ ಮುಂದಾಡುವ ॥
೭.	ಸಕಲ ಸಾಧನಮದ್ದ್ಯ ಉತ್ಕೃಷ್ಟ ವೆನಿಪದು ನಖ ಶಿಖ ಪರಿಪೂರ್ಣ ಗುರು ವಿಜಯವಿಠ್ಠಲ ವೊಲಿವ ॥
೮.	ನಿಮ್ಮ ಕರುಣದಿಂದ ಹರಿತಾನು ವೊಲಿವೊನು ನಿಮ್ಮಮಹಿಮ ಗುರು ವಿಜಯವಿಠ್ಠಲ ಪ್ರಿಯ ॥
೯.	ಯುಗಳ ಪಾದವೆ ನಮಿಸಿ ಮುಗಿವೆ ಕರಗಳನ್ನು ಜಗದೀಶ ಗುರು ವಿಜಯವಿಠ್ಠಲನ್ನ ತೋರಿಪ್ಪ ॥
೧೦.	ಪ್ರಾಣ ನೆಂದೆನಿಸುವಿ ಎನಗಾವ ಕಾಲದಲ್ಲಿ ಸ್ಥಾಣು ಪರ್ವತವಾಸ ಗುರು ವಿಜಯವಿಠ್ಠಲ ॥
೧೧.	ಹರಿಯ ಯಾಚಿಸು ಇನಿತು ಜನುಮದೊಳಗೆ ವೊಮ್ಮೆ ಮರುಳೆ ಬಾರದು ದೇಹ ಗುರು ವಿಜಯವಿಠ್ಠಲ ಬಲ್ಲ ॥
೧೨.	ಎಷ್ಟಪರಾಧಿಯಾಗೆ ಕೃಷ್ಣಾ ತಪ್ಪದು ನಿನಗೆ ಇಷ್ಟದೈವವೆ ಗುರು ವಿಜಯವಿಠ್ಠಲ ಪ್ರಿಯಾ॥
೧೩.	ನಾಮಮಾತ್ರವು ನೆನೆಯೆ ಭವರೋಗ ಪರಿಹಾರ ಶ್ರೀಮನೋಹರ ಗುರು ವಿಜಯವಿಠ್ಠಲ ಪ್ರಿಯ ॥
೧೪.	ಅನಂತ ಅನಂತ ಬ್ರೊಮ್ಹಾಂಡಾಧಿಪ ನೆನಿಪ ಉನ್ನಂತ ಮಹಿಮಾ ಗುರು ವಿಜಯವಿಠ್ಠಲ ಪ್ರಿಯ ॥
೧೫.	ಹರಿಯಾ ವಿಹಾರಕ್ಕೆ ಆವಾಸ ನೆನಿಸುವಿ ಗುರು ವಿಜಯವಿಠ್ಠಲನ್ನ ಸುಪ್ರೀತಾ ಘನದೂತ ॥

೧೬.	ಗುರುಕುಲ ತಿಲಕನೇ ಗುರುರಾಘವೇಂದ್ರಾಖ್ಯ ಸುರ ಕಲ್ಪ ತರು ಗುರು ವಿಜಯವಿಠ್ಠಲ ಪ್ರಿಯ ॥
೧೭.	ನಿನ್ನ ದರುಶನದಿಂದ ಅನಿಷ್ಟ ವನುನಾಶ ಘನ್ನ ಇಷ್ಟರೂಪ ಗುರು ವಿಜಯವಿಠ್ಠಲ ಪ್ರಾಪ್ತ ॥
೧೮.	ಕಂಟ ಕಾರಿಯ ಮೆಟ್ಟ ನಿನ್ನ ಯೆದಿಯ ತುಳಿವೆ ನಿ ಷ್ಟಂಟಕ ಗುರು ವಿಜಯವಿಠಲನ್ನ ಕೃಪೆಯಿಂದ ॥
೧೯.	ಘೋರಿಸುವ ದಾರಿದ್ರ ದೂರಮಾಡಿದ ನಿನ್ನ । ಚಾರು ಚರಣಾರವಿಂದವನೆ ತೋರಿ । ಹಾರೈಸಿದ ಬಯಕೆ ಪೂರೈಸಿದಿಯೋ ನಿನ್ನ । ಕಾರುಣ್ಯಕ್ಕೇನಂಬೆ ಕಮಲಾಲಯೇ । ಸಾರಿದೆನೋ ವರದಗೋಪಾಲ ವಿಠಲ ನಿನ್ನ । ಕಾರುಣ್ಯ ಪಾತ್ರನ್ನ ಮಾಡಿ ಕಾಯಿದೆಯೋ ಇಂದು ॥
೨೦.	ಸ್ಮರಿಸಿದವರನ ಕಾಯಿವಾ ಸಮ ಸೂರ್ಯಾನೇಕಪ್ರಭಾವಾ । ಸುರಮುನಿಗಳ ಸಂಜೀವ ಸಿರಿವೆಂಕಟ ನಮ್ಮನು ಪೊರೆವ ॥
೨೧.	ಪದ ॥ ಇಂದು ನಾನೇನು ಸುಕೃತವ ಮಾಡಿದೆನೊ ॥ ಇಂದಿರೆಅರಸ ವೆಂಕಟ ಬಂದ ಮನಿಗೆ ।೧। ಕರಯುಗದಲಿ ಶಂಖ ಚಕ್ರವ ಪಿಡಿದು ಎರಡೇಳು ಭುವನ ತನ್ನುದರದಲ್ಲಿಟ್ಟು ।೨। ಗರುಡನೇರಿ ಮೂರ್ಜಗವ ಮೋಹಿಸುತ । ಪುರಂದರವಿಠಲ ವೆಂಕಟ ಬಂದ ಮನಿಗೆ ।೩। ಗುರುಗಳ ಸ್ತವನ
೨೨.	ಸಹಯುವಾಗೆಮಗನುದಿನ ಸುಪ್ರಿಯ । ಜಯರಾಯ ಜಯರಾಯ ॥
೨೩.	ವಾದಿ ಗಜ ಮಸ್ತಕಾಂಕುಶ ಸುಜನಗೇಯ । ಮೇದಿನಿಸುರವಂದ್ಯ ಶ್ರೀಪಾದರಾಯ ॥
೨೪.	ವ್ಯಾಸಮುನಿ ಗುರುರಾಯ ದಾಸರ ಪ್ರಿಯ ॥
೨೫.	ವಿಜಯೀಂದ್ರ ಮುನೀಂದ್ರರೆಂಬಾಶ್ಚರ್ಯದ ಗಜೇಂದ್ರ ಬಂದಿದೆ ಸುಜನರ ನೋಡುವ ಬನ್ನಿ ॥
೨೬.	ಭೇದಾಭೇದಾ ವಾದಿಗಳ ಶಿರೋಮಣಿ । ವಾದಿರಾಜ ಕರುಣಾಂಭುದೆ ವಾದರಾಜ ॥
೨೭.	ದಾಸೋತ್ತಮನೀನೇ ಶ್ರೀ ವೈಕುಂಠ ದಾಸೋತ್ತಮನೀನೇ ಏಸೇಸು ಸುಕೃತಿಗಳು ನಿಮಗೆಣೆಯೇ ॥ ದಾಸೋತ್ತಮ ॥

೨೮.	ದಾತಗುರು ಜಗನ್ನಾಥ ವಿಠ್ಠಲನ ದೂತನ ಮಂತ್ರ ನಿ। ಕೇತನ ನಿಲಯಾ ರಾಘವೇಂದ್ರ ।। ರಾಘವೇಂದ್ರ ಗುರುರಾಯ ಘೋರ ಪಾಪೌಘಳೆಣಿಸದೆ ಪಾಲಿಸೋ ಬಿಡದೆ ರಾಘವೇಂದ್ರ ।।
೨೯.	ಮನವೇ ಹಿಗ್ಗದಿರು ಹಿರಿದಾಳಿಕಿಲಿಂದ । ಗುಣಿಸು ಸುಖಬಾರದುಲೇಶ । ನಿನಗೆ ಸ್ವಾತಂತ್ರ ವೆಂಬುದು ಕಾಣೆ ಎಂದಿಗೂ । ಗುಣನಿಧಿ ವಿಜಯವಿಠ್ಠಲನ ಪ್ರೇರಣೆಯೆಲ್ಲಿ ।।
೩೦.	ದಾಸರ ಭಾಗ್ಯವಿದು ಪುರಂದರ ದಾಸರ ಭಾಗ್ಯವಿದು ।। ಸರ್ವದೇಶದೊಳಗೆ ತುಂಬಿ ಸುಸುತಲಿದಕೋ ।। ದಾಸರಭಾಗ್ಯವಿದು ।।
೩೧.	ಪದ।। ವಿಜಯರಾಜ ಗುರುರಾಜಾಧಿರಾಜ ಮಹರಾಜಾಧಿರಾಜ ಮಹರಾಜ ಶಿರೋರತುನ । ತ್ಯಜಿಸದೆ ನಿಮ್ಮ ಪಾದಾಬ್ಜ ಬಿಡೆನೆಂಬೋ ಸುಜನರ ಪಾಲಿಸಯ್ಯ ।। ಪಲ್ಲ।। ಜ್ಞಾನಾಭಕುತಿಕೊಡು ದಾನಶೀಲನ ಮಾಡು ಹೀನ ಮನವ ಕೆಡಿಸು । ನಾನೆಂಬ ಅಹಂಕಾರವನ್ನೇ ತೊಲಗಿಸು ನಿನ್ನವರವನೆನಿಸೋ ।। ಧೇನಿಸುವಂದದಿ ಹರಿಯ ಪಾದಾಂಬುಜ ಮಾನಸದಲಿ ಸರ್ವದ । ಕಾಣಿಸುಕೊಡು ನಾನು ಜೀವನು ನಿಜವೆಂದು ಮಾನ(ಧ್ಯಾನ) ಮನಕೆ ಬರಲಿ ।೧। ಮೌನವಾಗಿರಲಾರು ಹೀತನೆ ನುಡಿದರೆ ಪ್ರಾಣಪ್ರೇರಕನಿಂದಲಿ । ಏನಾಡುವರೆಲ್ಲ ಧೇನಿಸಲಾಪಾರ ಆರುಸ್ವತಂತ್ರರಿನ್ನು ।। ದೀನನಾಗಿರಲಿ ಸಜ್ಜನರ ಪಾದಾಬ್ಜಕೆ ರೇಣುನಾಗಿ ನಡದು । ನೀನೆಗತಿಯಂದು ನಿಮ್ಮಮೊರೆಹೊಕ್ಕೆ ಕ್ಷೋಣಿಯೊಳಗೆ ಬಳಲಿ ।।೨।। ನಿಮ್ಮ ಕೊಂಡಾಡುವ ಭುಧರಕಾಣಲು ಅವರೆಮ್ಮಾಪ್ತರೆಂದೆನಲಿ ನಿಮ್ಮ ಪುಣ್ಯದ ಪುತ್ರ ಗೋಪಾಲದಾಸರು ಎಮ್ಮರಕ್ಷಿಪದೆನಲಿ ।। ಇಮ್ಮಹಿಯೊಳು ಏಸುಕಾಲವಾದರು ಪುಣ್ಯ ಸಮ್ಮಂಧ ಕೆಡದಿರಲಿ ಸುಮ್ಮನಸರೀಶ ರಘುಪತಿವಿಠಲ ನಮ್ಮ ಸ್ವಾಮಿಯೆನಲಿ ।।೩।।
೩೨.	ಗೋಪಾಲದಾಸರಾಯ ನಿನ್ನಯಪಾದ ನಾಪೊಂದಿದೆನು ನಿಶ್ಚಯಾ । ತಾಪತ್ರಯಗಳು ನಾನಾಪರಿಯಿಂದಲಿ ತಾ ಪೀಡಿಸುತಲಿರೆ ಕಾಪಾಡೋಗುರುರಾಯ ।। ಪ ।।
೩೩.	ತಂಗಿನೋಡಿದೆ ಏನಿಂದು ಕಂಗಳು ದಣಿಯೆ ಗುರು । ರಂಗನೊಲಿದ ದಾಸರಾಯ ।।ಪ।। ಶ್ರೀಪತಿಯೊಲಿಯೆಲೆಲ್ಲ ಪ್ರಾಪುತಿಯೆಂಬುವ ಪ್ರಮಾಣ । ದೀಪುರುಷರಲ್ಲಿಯೆ ಒಪ್ಪುವದು ।ತಂಗಿ। ಶಾಪಾನುಗ್ರಹ ಸಮರ್ಥರೀ ಪೊಡವಿಯೊಳು ನಿತ್ಯ । ಕಾಪಾಡುವ ನಮ್ಮನೆಲ್ಲರ ।೧।

ಶಿಖಿಯೊಳಿದ್ದ ಪೀಯೂಷ ಸುಖದಿ ಪಿತೃಗಳುಂಡರು ।
ಅಕಟಕಾಣರೀ ಜನವೆಂದು ।।ತಂಗಿ।।
ಸಕಲಗ್ರಂಥವ ಶೋಧಿಸಿ ಯುಕುತಿಯಿಂದ ಹರಿಕಥಾಮೃತ ।
ಸಕಲರಿಗಿತ್ತು ಸಲಹುವರೆ ।।೨।।
ಕಾಶೀ ಪ್ರಯಾಗ ವಾರಣಾಶಿಯಿಂದಧಿಕ ಹರಿ ।
ದಾಸರಾಯರಿದ್ದ ಸ್ಥಾನವು ।ತಂಗಿ।
ನಾಶವಾಗುದಘ ಮೀಸಲಾಗುವದು ಶ್ರೀ ಪ್ರಾ ।
ಣೇಶ ವಿಠಲ ಕೈಸೇರುವ ।।ತಂಗಿ।। ।।೩।।

೩೪. ಇಂದಿನ ದಿನವೇ ಶುಭ ದಿನವು । ನಮಗಿಂದಿನವಾರ ಶುಭವಾರ ।
ಇಂದಿನಯೋಗ ಶುಭಯೋಗ । ಇಂದಿನಕರಣ ಶುಭಕರಣ ।
ಇಂದಿನ ರಾತ್ರಿ ಶುಭರಾತ್ರಿ । ಇಂದುಪುರಂದರ ವಿಠಲನ ದಾಸರ
ದರ್ಶನವೇ ಸಂದರ್ಶನವು ।।

೩೫. ಹಗಲುನಿನ್ನ ನೆನಿಯಲಿಲ್ಲ ಹಸಿವೆ ತೃಷೆಯಿಂದಿ ಇರಳು ನಿನ್ನ ನೆನಿಯಲಿಲ್ಲ
ನಿದ್ರೆ ಭರದಿಂದ । ಇದರ ಎರಡರ ಬಾಧೆಗೆ ನಾ ಒಳಗಾದೆ
ಪುರಂದರವಿಠ್ಠಲ।।

೩೬. ಫಲಹಾರವ ಮಾಡೋ ಪರಮಪುರುಷನೆ ಶ್ರೀ ।
ಲಲನೆ ಲಕುಮಿಯ ಕರಕಂಜದಿಂದ ।।ಪಲ್ಲ।।
ಹಾಲು ಸಕ್ಕರೆ ಬೆಣ್ಣೆ ಜೇನುತುಪ್ಪ ಶಿಖರಣಿಯು ।
ಸ್ವಾದುರಸಾಯನ ಸವಿಎಲೆನೀರು
ಮೂರ್ಲೋಕದೊಡಯ ಹಯವದನಾನೆ ।
ಪಾಲಿಸು ಶ್ರೀನಿವಾಸ ಕರಕಂಜದಿಂದ ।।
ಬೂಟಕತನದಲ್ಲಿ ಹರಿದಾಸನಾದರೆ ।
ತೋಟಯಿಲ್ಲದೆ ಮೋಟೆಯೆತ್ತಿದಂತೆ ।
ನೀಟಾಗದು ಕಾಣೇ ಎಂದಿಗೂ ಯಮಭಟರ ।
ಕಾಟತಪ್ಪದು ಕಾಶಿಯೊಳಗಿದ್ದರೂ ।
ಹಾಟಕಾಂಬರಧಾರ ವಿಜಯವಿಠ್ಠಲ ।
ನಾಟಿಸೋ ನಿನ್ನ ಚರಣಾಬ್ಜಾದಲ್ಲಿ ಮನಸು ।।

ಶ್ರೀಗುರು ಮಧ್ವೇಶ ಕ್ರಿಷ್ಣಾರ್ಪಣಮಸ್ತು.

ಈಭಜನಾಪದ್ಧತಿ ಸಂಕ್ಷಿಪ್ತವಾಗಿ, ಬಹು ತತ್ವಭರಿತವಾಗಿ, ಪೂರ್ವಾನ್ಹಿಕ, ಉತ್ತರಾನ್ಹಿಕ ಸಹಿತವಾಗಿದೆ. ಹಳೇಪ್ರತಿಯಲ್ಲಿ ಬರೆದುದು ದೊರೆತಿದೆ: ಬಹುಶಾ ದಾಸರಾಯರೇ ಬರೆದುದಾಗಿದೆ.

ಶ್ರೀ ಮೊದಲಕಲ್ಲು ಶೇಷದಾಸರ ಸುಳಾದಿಗಳ ಆದ್ಯಂತಗಳು

ಮಖವನ್ನೇ ಮಾಡುವದು ಮರ್ಮವ ನೀನರಿತು ।
ವಿಖನ ಸಾರ್ಚಿತ ಪಾದ ಮನದಿ ನಿಲಿಸಿ ॥
ಹರಿಯಾ ಯಜಿಸು ಇನಿತು ಜನುಮದೊಳಗೆ ಒಮ್ಮೆ।
ಮರಳಿ ಬಾರದು ದೇಹ ಗುರುವಿಜಯವಿಠ್ಠಲ ಬಲ್ಲ ॥೧॥

ಆಲಿಸಿಕೇಳುವದು ಆದರದಿಂದಲಿ ।
ಶ್ರೀ ಲಕುಮೀಶನ ಭಕುತರೆಲ್ಲಾ ॥
ಸಕಲ ಸಾಧನ ಮಧ್ಯ ಉತ್ಕೃಷ್ಟವೆನಿಪದು ।
ನಖಶಿಖ ಪರಿಪೂರ್ಣ ಗುರುವಿಜಯವಿಠ್ಠಲ ವೊಲಿವ ॥೨॥

ಅರಹು ಮರುಹುಗಳಿಗೆ ಕಾರಣ ನೀನೆ ದೇವಾ ।
ನಿರುಪಮ ಮಹಿಮನೆ ನಿತ್ಯ ತೃಪ್ತ ॥
ಭಕ್ತರ ವಿಷಯದಿ ಯುಕುತಿ ಮಾಡದಿಲಿರೊ ।
ಭಕ್ತವತ್ಸಲ ಗುರುವಿಜಯವಿಠ್ಠಲರೇಯ ॥೩॥

ಬಲವದ್ರೂಪವಾದ ಪ್ರಾರಬ್ಧ ಕರ್ಮವನ್ನು ।
ನಳಿನ ಸಂಭವ ಮುಖ್ಯ ದಿವಿಜರೆಲ್ಲ ॥
ಪ್ರಾರಬ್ಧ ಕರ್ಮವನ್ನು ಮೀರುವರಿಲ್ಲ ಜಗದಿ ॥
ನೀರಜಾಕ್ಷನೆ ಗುರು ವಿಜಯವಿಠ್ಠಲರೇಯಾ ॥೪॥

ಪರಮ ಬಲವಂತನೆಂಬ ಗರ್ವ ತಾಳಿದದಕೆ ।
ನಿರುಪಮ ನಿರ್ಬಲನಾದೆ ನಿಂದು ॥
ನಿನ್ನ ಕರುಣವೆ ಸಕಲ ಸೌಭಾಗ್ಯಪದ ಪ್ರಾಪ್ತಿ ।
ಭಿನ್ನ ಜೀವರದಾತಾ ಗುರು ವಿಜಯವಿಠ್ಠಲರೇಯಾ ॥೫॥

ನಿನ್ನ ಕಾಂಬುವದೆನಗೆ ನಿಖಿಳ ಸೌಭಾಗ್ಯಪ್ರಾಪ್ತಿ ।
ನಿನ್ನ ಕಾಂಬುವದೆ ನಿತ್ಯಾನಂದ ॥
ನಿನ್ನ ಕಾಂಬುವದೆ ನಿತ್ಶೈಶ್ವರ್ಯವೊ ದೇವಾ ಪ್ರ-।
ಸನ್ನ ನಾಗುವದು ಗುರುವಿಜಯವಿಠ್ಠಲರೇಯಾ ॥೬॥

ಒಡಿಯನಿಲ್ಲದ ವೃಕ್ಷ ಕಂಡ ಕಂಡವರೆಲ್ಲ ।
ಬಡಿದು ತಿಂಬುವದು ನ್ಯಾಯವಾಯಿತೆನಗೆ ॥
ಭಕುತರ ಅಪರಾಧ ಸಾಸಿರ ವಿರಲಿನ್ನು ॥
ಶಕತ ರಕ್ಷಿಸೊ ಗುರುವಿಜಯವಿಠ್ಠಲಪ್ರಿಯ ॥೭॥

ಇಷ್ಟುನಿರ್ದಯವ್ಯಾಕೋ ಎಲೆ ಎಲೆ ಆಪ್ತನಾದ ।
ಕೃಷ್ಣ ನಿನಗೆ ನಾನು ದೂರಾದವನೆ ॥
ಅಹಿತ ಮಾಡುವನಲ್ಲ ಭಕುತರ ಸಮೂಹಕ್ಕೆ ।
ಲೋಹಿತಾಕ್ಷಗುರುವಿಜಯವಿಠ್ಠಲರೇಯ ॥೮॥

ಭಕ್ತರ ಭಿಡಿಯ ನಿನಗೆ ಅತ್ಯಂತವಾಗಿ ಉಂಟು ।
ಭಕ್ತರಾರ್ಜಿತವಾದ ಭಾಗ್ಯನಿದೆ ॥
ಭಕ್ತರಾಧೀನತೆ ಬಲು ಭೂಷಣೆಲೊ ನಿನಗೆ ।
ಉತ್ತಮೋತ್ತಮ ಗುರುವಿಜಯವಿಠ್ಠಲರೇಯ ॥೯॥

ಮಿತ್ರನು ಎಂದು ನಿನ್ನ ಮನದಿ ನಂಬಿದದಕ್ಕೆ ।
ಉತ್ತಮ ಉಪಕಾರ ಮಾಡಿದಯ್ಯಾ ॥
ಭಕುತಿ ಇಲ್ಲದೆ ಬರಿದೆ ಸಥೆಯಿಂದ ಬಿನ್ನೈಸಿದೆ ।
ಉಕುತಿ ಲಾಲಿಸು ಗುರುವಿಜಯವಿಠ್ಠಲರೇಯ ॥೧೦॥

ಮಾಯಾಗಾರನೆ ನಿನ್ನ ಮಾಯಾ ತಿಳಿಯುವದಕ್ಕೆ ।
ಕಾಯಾಜಾದ್ಯಾದಿ ಸುರರು ಸಮರ್ಥರೆ ॥
ನಿನ್ನ ಆಜ್ಞಾ ನಡೆಸಿದನೆಂಬೊ ಅಭಿಮಾನ ।
ಮನದಿ ಮರಿಯದಿರೋ ಗುರು ವಿಜಯವಿಠ್ಠಲರೇಯ ॥೧೧॥

ಹರಿ ನಿನ್ನ ನಿರ್ಘುಣ ತನಕೆ ಎಣೆ ಉಂಟೆ ।
ಪರಮ ನಿರ್ಭಾರ ಕರುಣಾರ್ದ್ರ ಹೃದಯಾ ॥
ಅನಿಮಿತ್ಯ ಬಾಂಧವನೆನಿಪ ದೇವರ ದೇವ ।
ಚಿನುಮಯ ಮೂರುತಿ ಗುರುವಿಜಯವಿಠ್ಠಲರೇಯ ॥೧೨॥

ಬಲವುಳ್ಳ ವಸ್ತು ಮಧ್ಯ ನಿನಗಿಂದಧೀಕವಾದ ।
ಬಲವುಳ್ಳ ವಸ್ತು ಆವದಯ್ಯ ಪೇಳೊ ॥
ದುರುಳನ್ನ ಪಕ್ಷಬಿಟ್ಟು ಎನ್ನ ಪಾಲಿಗೆ ಬಂದ ।
ಪರಿಯ ಮರಿಯದಿರು ಗುರುವಿಜಯವಿಠ್ಠಲ ॥೧೩॥

ಅಂದು ಶರ ತಲ್ಪದಲ್ಲಿ ಮಲಗಿಸಿದದರಿಂದ ।
ಇಂದು ದುಃಖದ ಶಯ್ಯಾ ಲೊರಗಿಸಿದಿಯಾ ॥
ಸತ್ಯ ಸಂಕಲ್ಪಕ್ಕೆ ಹಾನಿ ಎಂದಿಗೂ ಉಂಟೆ ।
ನಿತ್ಯ ತೃಪ್ತನೇ ಗುರುವಿಜಯವಿಠ್ಠಲರೇಯ ॥೧೪॥

ಅಪರಾಧಿ ಯಾಹದಕ್ಕೆ ಕಾರಣವಿನಿತುಕೇಳು ।
ಶಫರಾದಿ ದಶರೂಪ ಅನಂತನೇ ॥
ಸಹಸ್ರ ಅಪರಾಧ ಮಾಡಿ ಪ್ರಾಂತ್ಯದಿ ನಿನಗೆ ।
ದೇಹಿ ಎಂದೆನೊ ಗುರುವಿಜಯವಿಠ್ಠಲರೇಯ ॥೧೫॥

ಅಂದು ಮಾನ್ಯರನ್ನು ಆವಾವ ಬಗೆ ।
ಯಿಂದ ನಿಂದು ನಿರ್ಘಣವಾದ ವೃತ್ತಿಯಲ್ಲಿ ॥
ಗಾತ್ರ ನಿನ್ನದು ದೇವ ಮನಬಂದ ತೆರಮಾಡೊ ।
ಸೂತ್ರಧಾರನೆ ಗುರುವಿಜಯವಿಠ್ಠಲಪ್ರೀಯ ॥೧೬॥

ಇಂದಿರಾಪತಿ ನಿನ್ನ ನಿಗ್ರಹಕೆ ಪಾತ್ರರೆನಿಪ ।
ಕುಂದು ಜನರಾದ ಕಲ್ಯಾದಿಗಳಿಗೆ ॥
ನಿನ್ನ ನೋಡದಲಿಪ್ಪ ದಿನವೆ ದುರ್ದಿನವಯ್ಯಾ ।
ಮನ್ನದಿ ನಿಜವಿದು ಗುರುವಿಜಯವಿಠ್ಠಲರೇಯಾ ॥೧೭॥

ಏಸುದಿವಸ ಉಂಟು ಈ ಪ್ರಾರಬ್ಧಕರ್ಮ ।
ಸಾಸಿರ ರೂಪನೆನಿಪ ಏಕಮೇವಾ ॥
ನಾಮ ಮಾತ್ರವ ನೆನೆಯೆ ಭವರೋಗ ಪರಿಹಾರ ।
ಶ್ರೀ ಮನೋಹರ ಗುರುವಿಜಯವಿಠ್ಠಲರೇಯಾ ॥೧೮॥

ಇಂದಿನ ದಿನದಲ್ಲಿ ಸಕಲ ಸಜ್ಜನರಿಂದ ಆ- ।
ನಂದದಿ ಇರುವಂಥ ಮನವೆ ಮಾಡೊ ॥
ಮಿಂಚಿನಂದದಿ ಪೊಳೆಯೊ ಹೃದಯ ಕಮಲದಲ್ಲಿ ।
ಪಂಚಪಾಂಡವರ ಪ್ರಿಯ ಗುರುವಿಜಯವಿಠ್ಠಲರೇಯ ॥೧೯॥

ಇಂದು ಎನಗೆ ನೀ ನುಡಿದ ಮಾತುಗಳಿಂದ ಆ- ।
ನಂದ ವಾಯಿತು ಮನಕೆ ಅಂಬುಜಾಕ್ಷಾ ॥
ಅಪೇಕ್ಷೆ ಯೆನಗಿದೆ ನಿನ್ನ ಪಾದವೆ ಸಾಕ್ಷಿ ।
ಉಪೇಕ್ಷೆ ಮಾಡದಲಿರೋ ಗುರುವಿಜಯವಿಠ್ಠಲರೇಯ ॥೨೦॥

ಭವಾಮಿನಚಿರಾತ್ಪಾರ್ಥ ಎಂತೆಂದು ನುಡಿದ ನುಡಿ ।
ಕೇವಲ ಸುಖಪ್ರದವಾದರೇನೂ ॥
ನಿನ್ನ ಕಾಣದ ಕಳಿವಾ ದಿನವೆ ದುರ್ದಿನ ದೇವಾ ।
ಮನ್ನಿಸಿ ರಕ್ಷಿಪದು ಗುರುವಿಜಯವಿಠ್ಠಲರೇಯ ॥೨೧॥

ಎನ್ನಣ್ಣನ ಕೃಪೆ ಇನ್ನು ಎನಗಿಲ್ಲದುದರಿಂದ ।
ಎನ್ನ ಮೇಲೆ ಈ ಪರಿ ಮುನಿದ್ಯಾ ದೇವಾ ॥
ಅಣ್ಣನ ಬಲವೆನಗೆ ಬಲುಶೋಭಾ ಬಲುಶೋಭಾ ।
ಘನ್ನ ಮಹಿಮ ಒಲಿವ ಗುರುವಿಜಯವಿಠ್ಠಲರೇಯ ॥೨೨॥

ತತ್ರ ಶ್ರೀ ರ್ವಿಜಯೊಭೂತಿ ಎಂದ ಕಾರಣದಿಂದ ।
ಶ್ರುತ್ಯಾಭಿಮಾನ್ಯರಾದ ಸುರರ ತತಿಯ ॥
ನಿನ್ನ ಕರುಣದಿಂದ ಧನ್ಯನಾನೆಲೊ ದೇವಾ ।
ಪನ್ನಂಗಾಚಲವಾಸ ಗುರುವಿಜಯವಿಠ್ಠಲರೇಯಾ ॥೨೩॥

ಅತಿಹಿತ ಮಾಡುವಂಥ ಆಪ್ತನಾದವನಾಗಿ ।
ಅತಿಶಯ ನಿರ್ಘಣ ವೃತ್ತಿಯಿಂದ ॥
ಪ್ರಾಣನೆಂದೆನಿಸುವಿ ಎನಗಾವ ಕಾಲದಲ್ಲಿ ।
ಸ್ಥಾಣು ಪರ್ವತವಾಸ ಗುರುವಿಜಯವಿಠ್ಠಲ ॥೨೪॥

ಪ್ರಾರಬ್ಧ ಕರ್ಮವೆಂಬ ಸ್ತಂಭ ನಿಮಿತ್ಯವ ಮಾಡಿ ।
ನೀರಜಾಕ್ಷನೆ ನೀನು ತದ್ರೂಪಾದಿ ॥
ಕೃಷ್ಣಾ ಎನಗೆ ನೀನು ಪ್ರೀತನಾಗುತಲಿರೆ ।
ದುಷ್ಟ ಕರ್ಮಗಳುಂಟೆ ಗುರುವಿಜಯವಿಠ್ಠಲ ॥೨೫॥

ಯಾಕೆ ಮುನಿಸು ನಿನಗೆ ಎಲೋ ಎಲೋ ಸಖ್ಯನೆ ।
ಕಾಕು ನರನಕೂಡ ಕಠಿಣತನವೆ ॥
ಭಕ್ತರಲ್ಲಿ ದೋಷ ಎಣಿಪದುಚಿತವಲ್ಲ ।
ಸೂತ್ರಧಾರಕ ಗುರುವಿಜಯವಿಠ್ಠಲರೇಯ ॥೨೬॥

ತಸ್ಮಾತ್ ತ್ವಮುತ್ತಿಷ್ಟ ಯಶೋಲಭಸ್ವ ।
ಜಿತ್ವಾ ಶತ್ರೂನ್ ಭುಂಕ್ಷ್ವ ರಾಜ್ಯಂ ಸಮೃದ್ಧಂ ॥
ಬಹ್ಮಸ್ತು ಬ್ರಹ್ಮನಾಮಾಸೌ ರುದ್ರಸ್ತು ರುದ್ರನಾಮಾ ।
ಎಮ್ಮನಾಮವು ನೀನೇ ಗುರುವಿಜಯವಿಠ್ಠಲರೇಯಾ ॥೨೭॥

ಅಪರಾಧಿ ನಾನಲ್ಲ ಅಪರಾಧ ಎನಗಿಲ್ಲ ।
ವಿಪರೀತ ವೇನಯ್ಯಾ ಎನ್ನಿಂದಲಿ ॥
ಭಕತರ ಅಪರಾಧ ವೆಣೇಸದೆ ತ್ವರಿತದಿ ಚಿತ್ತ- ।
ದೊಳಗೆ ಪೊಳೆಯೊ ಗುರುವಿಜಯವಿಠ್ಠಲರೇಯಾ ॥೨೮॥

ಮಾಡಿದ ಋಣವನ್ನು ತೀರಿಸದಲೆ ಬಿಡದು ।
ನಾಡೊಳು ಎಣಿಸಿ ಗುಣಿಸೆ ವಿಧಿಗಾದರೂ ॥
ಯುಕುತಿ ವಂತರ ಮಧ್ಯ ನಿನಗಿಂದಧಿಕರಿಲ್ಲ ।
ನಖಶಿಖ ಪರಿಪೂರ್ಣ ಗುರುವಿಜಯವಿಠ್ಠಲರೇಯಾ ॥೨೯॥

ದೃಷ್ಟಿಲಿ ನೋಡದಂಥ ಅಪರಾಧವೆನ್ನಕಡೆ ।
ಎಷ್ಟೆಷ್ಟು ನೋಡಿದಯ್ಯಾ ಕೃಷ್ಣರಾಯಾ ॥
ಎಷ್ಟಪರಾಧಿಯಾಗೆ ಕೃಷ್ಣ ತಪ್ಪದೋ ನಿನಗೆ ।
ಇಷ್ಟ ದೈವವೇ ಗುರುವಿಜಯವಿಠಲರೇಯಾ ॥೩೦॥

ಬೊಮ್ಮಾದಿಗಳಿಗಿತ್ತ ವರ ಸತ್ಯ ಮಾಡುವಂಥ ।
ಆ ಮಹಾ ಮಹಿಮನಾದ ಹರಿಯೇ ನೀನು ॥
ಸಮ್ಮುಖವಾಗುವದು ಸ್ಥಾನಭೇದದಲ್ಲಾಗೆ ।
ಖಮ್ಮಹಿಯೊಡೆಯ ಗುರುವಿಜಯವಿಠ್ಠಲರೇಯಾ ॥೩೧॥

ಆವನ್ನ ವಧೆಯನ್ನು ಇನಿತು ಮಾಡಿದಿ ಎಂದು ।
ದೇವ ಎನ್ನನು ಈಗ ಹಂಗಿಸಿದೀ ॥
ಗುಣನಿಧಿ ಗುರುವಿಜಯವಿಠ್ಠಲರೇಯ ।
ಮುನಿದು ನೋಡುವದಕ್ಕೆ ಅನ್ಯನೇನೋ ಸ್ವಾಮಿ ॥೩೨॥

ಕ್ಷಿತಿಯ ಜನರು ನಿನ್ನ ದಯದಿ ಬೇಡುವುದಕ್ಕೆ ।
ಸಥೆ ಒಂದುಂಟು ಕೇಳು ಬಿನ್ನೈಸುವೆ ॥
ಚಿನ್ಮಯಮೂರುತಿ ಗುರುವಿಜಯವಿಠ್ಠಲರೇಯ ।
ಮನ್ನಿಸಿ ಇದಕಿನ್ನು ಉತ್ತರ ಪೇಳುವದು ॥೩೩॥

ಅನಂತಜನ್ಮದಲ್ಲಿ ನಿನ್ನಗಲದೆ ಇದ್ದ ।
ಉನ್ನತ ಭಕುತಿಲಿ ಭಜಿಸಿದೆನೋ ॥
ಅನಂತ ಜನುಮದ ವ್ರತಪುಣ್ಯ ಫಲವಿದೆ ।
ಅನಂತ ಗುಣಪೂರ್ಣ ಗುರುವಿಜಯವಿಠ್ಠಲರೇಯಾ ॥೩೪॥

ಇಂದು ಮುಖಿಯೆ ನಿನ್ನ ಸಂದರುಶನದಿಂದಾ-।
ನಂದ ವಾಯಿತು ಅರವಿಂದ ನಯನೆ ॥
ನಿನ್ನ ದರುಶನದಿಂದ ಅನಿಷ್ಟವನು ನಾಶ ।
ಘನ್ನ ಇಷ್ಟರೂಪ ಗುರುವಿಜಯವಿಠ್ಠಲ ಪ್ರಾಪ್ತಾ ॥೩೫॥

ಘನದಯಾನಿಧಿಯಾದ ಪವನರಾಯನೆ ನಮೊ ।
ಪುನರಪಿ ನಮೋ ನಿನ್ನ ಪಾದಸರಸಿರುಹಕೆ ॥
ಹರಿಯ ವಿಹಾರಕ್ಕೆ ಆವಾಸನೆನಿಸುವಿ ।
ಗುರುವಿಜಯವಿಠ್ಠಲನ್ನ ಸುಪ್ರೀತ ಘನದೂತ ॥೩೬॥

ಹಿತಮಾಳ್ಪ ಜನಕನಾಗಿ ರಕ್ಷಿಸು ಎಂದೆಂಬೆನೆ ।
ಪಿತೃ ಸಮಾನ ಜೇಷ್ಠನೆಂಬ ವಿಧದಿ ॥
ನಿನ್ನ ಕರುಣದಿಂದ ನಿಖಿಳ ಸೌಖ್ಯವೆ ಉಂಟು ।
ಉನ್ನತ ಮಹಿಮ ಗುರುವಿಜಯವಿಠ್ಠಲ ಒಲಿವ ॥೩೭॥

ಪಿತೃಸಮಾನ ಜೇಷ್ಠನೆಂತೆಂಬ ವಿಧದಿಂದ ।
ಪಿತೃನಿಷ್ಟವಾದ ಕರುಣದಿಂದ ॥
ಅಂದು ಮಾಡಿದದೇನು ಆಶ್ಚರ್ಯವಲ್ಲ ನಿನಗೆ ।
ಇಂದು ಪಾಲಿಸು ಗುರುವಿಜಯವಿಠ್ಠಲ ಪ್ರೀಯಾ ॥೩೮॥

ತಂದೆ ನಿನ್ನಯಪಾದ ಸಂದರುಶನದಿಂದಾ ।
ನಂದವಾಯಿತು ಎನಗೆ ಅಮರೇಂದ್ರನೇ ॥
ಸುಖವೈದು ಎಂದು ನೀನು ಅನುಗ್ರಹ ಮಾಡಿದದಕೆ ।
ಸಖನಾದ ಗುರುವಿಜಯವಿಠ್ಠಲನ್ನ ತೋರಿಪದೊ ॥೩೯॥

ಎಲೆ ಎಲೆ ಭೀಷ್ಮದ್ರೋಣ ಕೃಪ ಕರ್ಣ ಅಶ್ವತ್ಥಾಮ ।
ಸಲೆ ಕರುಣೆಗಳ ಪಾದ ಸರಸಿರುಹಕೆ ॥
ಯುಗಳ ಪಾದಕೆ ನಮಿಸಿ ಮುಗಿವೆ ಕರಗಳನ್ನು ।
ಜಗದೀಶ ಗುರುವಿಜಯವಿಠ್ಠಲನ್ನ ತೋರಿಪದು ॥೪೦॥

ಎಲೆ ಎಲೆ ಪರಮದುಷ್ಟನಾದ ಕಲಿಯೆ ನಿನ್ನ ।
ತಲೆಯ ಮೇಲೆ ಕಾಲು ಕೊಟ್ಟು ನಡಿವೆ ಸತತ ॥
ಕಂಟಕಾರಿಯ ಮೆಟ್ಟಿ ನಿನ್ನ ಎದಿಯ ತುಳಿವೆ ನಿ ।
ಷ್ಕಂಟಕ ಗುರುವಿಜಯವಿಠ್ಠಲನ್ನ ಕೃಪೆಯಿಂದೆ ॥೪೧॥

ಘನ ದಯಾನಿಧಿಯಾದ ಗುರುರಾಘವೇಂದ್ರ ನಿಮ್ಮ ।
ವನಜ ಪಾದ ಯುಗಕೆ ನಮೋ ನಮೋ ॥
ಗುರು ಕುಲತಿಲಕನೆ ಗುರುರಾಘವೇಂದ್ರಾಖ್ಯ ।
ಸುರಕಲ್ಪತರು ಗುರುವಿಜಯವಿಠ್ಠಲ ಪ್ರೀಯ್ಯಾ ॥೪೨॥

ವೈವಾಹ ಮಾಡಿದೆ ವಿಭವ ಪೂರ್ವಕದಿಂದ ।
ಆವದು ಇದಕೆ ಸಮವೆಂದು ತಿಳಿದು ॥
ಮದುವೆ ಎನಿಪದಿದು ಸಿರಿ ನಾರಾಯಣರಿಗೆ ।
ಪದವಿಗೆ ಸೋಪಾನ ಗುರುವಿಜಯವಿಠ್ಠಲ ವಲಿವಾ ॥೪೩॥

॥ ಶ್ರೀ ಗುರುಮಧ್ವೇಶಾರ್ಪಣಮಸ್ತು ॥

॥ श्रीदिग्विजयरामोविजयते ॥







ಜಗದ್ಗುರು ಶ್ರೀ ಮಧ್ವಾಚಾರ್ಯ ಮೂಲಮಹಾಸಂಸ್ಥಾನ

ಉತ್ತರಾದಿಮಠ

ಶ್ರೀಮದುತ್ತರಾದಿಮಠಾಧೀಶರಾದ

ಶ್ರೀ ಶ್ರೀ 1008 ಶ್ರೀಸತ್ಯಾತ್ಮತೀರ್ಥಶ್ರೀಪಾದಂಗಳವರು

ತಮ್ಮ ಅಮೃತ ಹಸ್ತದಿಂದ

ದಾಸಸಾಹಿತ್ಯ ನಿಷ್ಣಾತರಾದ ಹರಿದಾಸಸಾಹಿತ್ಯ ಸೇವಾಸಕ್ತರಾದ

"ಶ್ರೀ ಉಪ್ಪಲಿ ಮಧ್ವರಾವ್" ಇವರಿಗೆ

ಇವರ ವಿಶೇಷವಾದ ದಾಸಸಾಹಿತ್ಯ ಕೃಷಿಯನ್ನು

ಸುಳಾದಿಗಳವಿಶೇಷ ಅಧ್ಯಯನವನ್ನು ಅವಲೋಕಿಸಿ

"ದಾ ಸ ಸಾ ಹಿ ತ್ಯ ಭೂ ಷ ಣ"

ಎಂಬ ಪ್ರಶಸ್ತಿಯನ್ನು ನೀಡಿ ಅನುಗ್ರಹಿಸುತ್ತಿದ್ದಾರೆ.

ದಿನಾಂಕ :- 02-10-2006

ಸ್ಥಳ :- ರಾಯಚೂರು.

श्री सत्यात्मतीर्थ:
उत्तरादिमठ

ವ್ಯಯನಾಮ ಸಂವತ್ಸರ ವಿಜಯದಶಮಿ